ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಜನವರಿ 11, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 239 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



**ಭತ್ತದ ನಾಟಿಗೆ ಸಿದ್ಧತೆ**

ತುಂಗಭದ್ರಾ ನದಿ ಪಾತ್ರದಲ್ಲಿ ಮತ್ತು ದೇವರ ಬೆಳಕೆರೆ ಪಿಕಪ್ ಡ್ಯಾಂ ವ್ಯಾಪ್ತಿಯಲ್ಲಿ ಪಂಪ್‌ಸೆಟ್ ಮೂಲಕ ನೀರು ತಂದು ಬೇಸಿಗೆ ಹಂಗಾಮಿನ ಭತ್ತದ ನಾಟಿ ಮಾಡಲು ರೈತರು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ದೇವರ ಬೆಳಕೆರೆ ಪಿಕಪ್ ಡ್ಯಾಂ ಸಮೀಪದಲ್ಲಿ ಬೂದಿಹಾಳ್ ರೈತರೊಬ್ಬರು ಭತ್ತದ ಸಸಿ ಮಡಿ ಪಕ್ಕದ ಗದ್ದೆಯನ್ನು ನಾಟಿ ಮಾಡಲು ಟ್ರ್ಯಾಕ್ಟರ್‌ನಿಂದ ರೊಳ್ಳಿ ಹೊಡೆಯುತ್ತಿರುವಾಗ ಕೆಸರಿನಲ್ಲಿರುವ ಹುಳುಗಳನ್ನು ತಿನ್ನಲು ಬೆಳ್ಳಕ್ಕಿಗಳು ಲಗ್ಗೆ ಇಟ್ಟಿರುವ ದೃಶ್ಯ ಬುಧವಾರ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು.

ಚಿತ್ರ : ಜಿಗಳಿ ಪ್ರಕಾಶ್

# ಹತ್ತು ಸಚಿವರ ಕಣಕ್ಕಿಳಿಸಿ

## ಲೋಕಸಭಾ ಚುನಾವಣೆ: ಎಐಸಿಸಿಗೆ ಕನುಗೋಳು ಸಲಹೆ

**ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವಿಗೆ ಸಹಕರಿಸಿದ್ದ ಕನುಗೋಳು ಸಮೀಕ್ಷೆ**

ಬೆಂಗಳೂರು, ಜ. 10 - ಚುನಾವಣಾ ರಣತಂತ್ರ ನಿಪುಣ ಸುನೀಲ್ ಕನುಗೋಳು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಕೆಲವು ಸಚಿವರಿಗೆ ಸಿಂಹ ಸ್ವಪ್ನವಾಗಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಹೆಚ್ಚು ಸ್ಥಾನ ಗಳಿಸಬೇಕೆಂದರೆ ಕನಿಷ್ಟ 10 ವರ್ಚಸ್ವೀ ಮತ್ತು ಪ್ರಭಾವೀ ಸಚಿವರನ್ನು ಚುನಾವಣಾ ಕಣಕ್ಕಿಳಿಸುವಂತೆ ಎಐಸಿಸಿಗೆ ಕನುಗೋಳು ವರದಿ ನೀಡಿದ್ದಾರೆ.

ಈಗಾಗಲೇ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೂರ್ನಾಲ್ಕು ಚುನಾವಣಾ ಪೂರ್ವ ಸಮೀಕ್ಷೆ ನಡೆಸಿ, ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್ ಗಾಂಧಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ವರದಿ ಆಧಾರದ ಮೇಲೆ ಮಾಹಿತಿ ನೀಡಿದ್ದಾರೆ.

ಅಷ್ಟೇ ಅಲ್ಲ ಯಾವ ಸಚಿವರನ್ನು ಯಾವ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದರೆ ಪಕ್ಷಕ್ಕೆ ಯಾವ ರೀತಿ ಲಾಭವಾಗುತ್ತದೆ ಎಂಬ ಪರಿಪೂರ್ಣ ಮಾಹಿತಿ ನೀಡಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆ ವೇಳೆ ಕನುಗೋಳು ನಡೆಸಿದ ಸಮೀಕ್ಷೆಗಳಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಪ್ರಚಂಡ ಬಹುಮತದಿಂದ ಅಧಿಕಾರದ ಚುಕ್ಕಾಣಿ ಹಿಡಿಯಿತು. ಅಲ್ಲದೆ ಇತ್ತೀಚೆಗೆ ತೆಲಂಗಾಣ ರಾಜ್ಯದಲ್ಲೂ ಕನುಗೋಳು ತೆರೆಮರೆಯಲ್ಲಿ ಕೆಲಸ ಮಾಡಿದ್ದರು.

ಕರ್ನಾಟಕಕ್ಕೆ ಸೀಮಿತವಾಗಿ ಕನುಗೋಳು ಅವರಿಂದಲೇ ಚುನಾವಣಾ ಪೂರ್ವ ವರದಿಯನ್ನು ಎಐಸಿಸಿ ಪಡೆದುಕೊಂಡಿದೆ.

ಕನುಗೋಳು ವರದಿಗೆ ರಾಹುಲ್ ಗಾಂಧಿ ಹೆಚ್ಚು ಮಾನ್ಯತೆ ನೀಡುತ್ತಿದ್ದಾರೆ. ವರದಿ ತಲುಪುತ್ತಿದ್ದಂತೆ ನಗರಕ್ಕೆ ಧಾವಿಸಿ ಕಳೆದ 3 ದಿನಗಳಿಂದ (4ನೇ ಪುಟಕ್ಕೆ)

# ಗ್ಯಾರಂಟಿ ಅನುಷ್ಠಾನ ಸಮಿತಿ ರಚನೆ

**ರಾಜ್ಯದಿಂದ ವಿಧಾನಸಭಾ ಕ್ಷೇತ್ರಗಳವರೆಗಿನ ಸಮಿತಿಗಳಿಗೆ ಕಾರ್ಯಕರ್ತರ ನೇಮಕ**

ಬೆಂಗಳೂರು, ಜ. 10 - ಲೋಕಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ, ಆಡಳಿತ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರಪೂರ ಕೊಡುಗೆ ನೀಡಿದ್ದಾರೆ.

ಬರುವ ಮಾರ್ಚ್ ಅಂತ್ಯದ ವೇಳೆಗೆ ಪ್ರತಿ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ತಲಾ 25 ಕೋಟಿ ರೂ. ಅನುದಾನ ಹಾಗೂ ಸರ್ಕಾರದ ವಿವಿಧ ಸಂಸ್ಥೆಗಳಿಗೆ ತಕ್ಷಣವೇ ಕಾರ್ಯಕರ್ತರ ನೇಮಕ ಮಾಡಲಿ ದ್ದಾರೆ. ಸದಸ್ಯತ್ವದ ಆಡಳಿತಾವಧಿ ಎರಡು ವರ್ಷ ಇರಲಿದೆ.

ಗ್ಯಾರಂಟಿ ಯೋಜನೆಗಳಿಗೆ ಎದುರಾಗಿರುವ ಅಪಪ್ರಚಾರಕ್ಕೆ ಇತಿಶ್ರೀ ಹಾಡಿ ಕೆಳಹಂತದಲ್ಲಿ ಪ್ರಚಾರ ದೊರಕಿಸಲು ರಾಜ್ಯ, ಜಿಲ್ಲಾ ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಗ್ಯಾರಂಟಿಗಳ ಅನುಷ್ಠಾನ ಸಮಿತಿ ರಚಿಸಲಾಗುವುದು ಎಂದು ಘೋಷಿಸಿದ್ದಾರೆ.

ಅವರು ಇಂದು ಕೆಪಿಸಿಸಿ ಕಚೇರಿಯಲ್ಲಿ ನಡೆದ ಲೋಕಸಭಾ ಚುನಾವಣಾ ಸಿದ್ಧತಾ (4ನೇ ಪುಟಕ್ಕೆ)

# ರಾಹುಲ್ ಗಾಂಧಿ ಯಾತ್ರೆಗೆ ಷರತ್ತಿನ ಅನುಮತಿ



ಇಂಫಾಲ್, ಜ. 10 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವ ದಲ್ಲಿ ನಡೆಸಲುಉದ್ದೇಶಿಸಿರುವಭಾರತ್‌ಜೋಡೋ ನ್ಯಾಯ ಯಾತ್ರೆಗೆ ಇಂಫಾಲದಲ್ಲಿ ಚಾಲನೆ ನೀಡಲು ಮಣಿಪುರ ಸರ್ಕಾರ ಷರತ್ತಿನ ಅನುಮತಿ ನೀಡಿದೆ. ಸೀಮಿತ ಸಂಖ್ಯೆ ಯಲ್ಲಿ ಜನರು ಭಾಗಿಯಾಗಬೇಕು ಎಂದು ತಿಳಿಸಲಾಗಿದೆ.

ಜ. 14ರಂದು ನಡೆಯಲಿರುವ ಯಾತ್ರೆ ಉದ್ಘಾಟನೆಯಲ್ಲಿ ಸೀಮಿತ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಬೇಕು. (4ನೇ ಪುಟಕ್ಕೆ)

# ಭದ್ರಾ ಸಲಹಾ ಸಮಿತಿ ನಿರ್ಣಯ ರದ್ದುಗೊಳಿಸಲು ಆಗ್ರಹ




**ಜಿಲ್ಲಾ ರೈತ ಒಕ್ಕೂಟದಿಂದ ಪ್ರತಿಭಟನೆ, ರಸ್ತೆ ತಡೆ, ಸರ್ಕಾರಕ್ಕೆ ಮನವಿ**

ದಾವಣಗೆರೆ, ಜ.10- ಭದ್ರಾ ನದಿ ನೀರು ನಮ್ಮ ಹಕ್ಕು. ಭದ್ರಾ ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯ ರದ್ದುಗೊಳಿಸುವಂತೆ ಆಗ್ರಹಿಸಿ ಜಿಲ್ಲಾ ರೈತ ಒಕ್ಕೂಟದಿಂದ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಪಿ. ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಿಂದ ಹೊರಟ ರೈತ ಮುಖಂಡರು, ಉಪ ವಿಭಾಗಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ಮೂಲಕ ತೆರಳಿ, ಪಿ.ಬಿ. ರಸ್ತೆಯಲ್ಲಿ ಮಾನವ ಸರಪಳಿ ರಚಿಸಿ ಅರ್ಧ ಗಂಟೆಗೂ ಹೆಚ್ಚು ಹೊತ್ತು ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹರಿಹರ ಶಾಸಕ ಬಿ.ಪಿ. ಹರೀಶ್, ನೀರಾವರಿ ಸಲಹಾ ಸಮಿತಿ ಅಧ್ಯಕ್ಷರೂ ಆಗಿರುವ ಮಧು ಬಂಗಾರಪ್ಪ ಅಕ್ರಮ ಪಂಪ್‌ಸೆಟ್ ದಾರರ ಏಜೆಂಟರಾಗಿ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಅವರಿಗೆ ಅಚ್ಚುಕಟ್ಟು ಪ್ರದೇಶದ ಅರಿವಿಲ್ಲ. ಮುಂಬರುವ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಶಿವಮೊಗ್ಗ, ಭದ್ರಾವತಿ ಭಾಗದ ಜನರ ಮತ ಗಳಿಕೆಗಾಗಿ ಈ ರೀತಿಯ ಅವೈಜ್ಞಾನಿಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಸಲಹಾ ಸಮಿತಿಯ ನೇತೃತ್ವ ವಹಿಸಿಕೊಳ್ಳಬೇಕು. ಈ ಭಾಗದ ರೈತರ ಹಿತ ಕಾಪಾಡಲು ಮುಂದಾಗಬೇಕು. ರೈತರ ವಿಚಾರದಲ್ಲಿ ನಾವು ಎಂದಿಗೂ ಜೊತೆಯಲ್ಲಿರುತ್ತೇವೆ ಎಂದು ಹೇಳಿದರು.

ರೈತ ಮುಖಂಡ ಹೆಚ್.ಆರ್. ಲಿಂಗರಾಜ್ ಶಾಮನೂರು ಮಾತನಾಡಿ, ಈ ಭಾಗದ ರೈತರಿಗೆ ಮಾರಕವಾಗಿರುವ ಸಲಹಾ ಸಮಿತಿಯ ನಿರ್ಣಯವನ್ನು ಮರು ಪರಿಶೀಲನೆ ಮಾಡಬೇಕು ಎಂದು ಆಗ್ರಹಿಸಿದರು.

ಲೋಕಿಕೆರೆ ನಾಗರಾಜ್ ಮಾತನಾಡಿ, ನೀರಿಗಾಗಿ ಹೋರಾಟ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ದುರಂತ. ತಿಂಗಳಲ್ಲಿ 12 ದಿನ ನೀರು ಹರಿಸಿದರೆ ಯಾವ ಬೆಳೆಯನ್ನೂ ಬೆಳೆಯಲಾಗದು. ಶೀಘ್ರವೇ 20 ದಿನದಂತೆ 60 ದಿನ ನೀರು ಹರಿಸಬೇಕು ಎಂದರು. ಬಿ.ಎಂ. ಸತೀಶ್ (4ನೇ ಪುಟಕ್ಕೆ)

# ಜಡ್ಜ್‌ಗಳ ಬಗ್ಗೆ ವಿವಾದಿತ ಹೇಳಿಕೆ, ವಕೀಲಗೆ ಶಿಕ್ಷೆ

ನವದೆಹಲಿ, ಜ. 10 – ದೆಹಲಿ ಹೈಕೋರ್ಟ್ ಹಾಗೂ ಜಿಲ್ಲಾ ನ್ಯಾಯಮೂರ್ತಿಗಳ ವಿರುದ್ಧ ವಿವಾದಾತ್ಮಕ, ಅನಪೇಕ್ಷಿತ ಹಾಗೂ ಆಧಾರ ರಹಿತ ಹೇಳಿಕೆಗಳನ್ನು ನೀಡಿದ ವಕೀಲರೊಬ್ಬರಿಗೆ ದೆಹಲಿ ಹೈಕೋರ್ಟ್ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

2022ರ ಜುಲೈನಲ್ಲಿ ಏಕಸದಸ್ಯ ಪೀಠದ ಎದುರು ಅರ್ಜಿಯೊಂದನ್ನು ಸಲ್ಲಿಸಿದ್ದ ವಕೀಲ, ಕೆಲ ನ್ಯಾಯ ಮೂರ್ತಿಗಳು ಪಕ್ಷಪಾತಿಯಾಗಿ ಹಾಗೂ ನಿರಂಕುಶವಾಗಿ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಈ ಅರ್ಜಿಯಲ್ಲಿ ಕೆಲ ನ್ಯಾಯಮೂರ್ತಿಗಳ ಹೆಸರುಗಳನ್ನೂ ಉಲ್ಲೇಖಿಸಿದ್ದರು.

ನ್ಯಾಯಾಂಗ ನಿಂದನಾತ್ಮಕವಾಗಿರುವ ಈ ಆರೋಪ ವಾಪಸ್ ಪಡೆಯುವಂತೆ ನ್ಯಾಯಮೂರ್ತಿಗಳು ಹೇಳಿದ್ದರು. ಆದರೆ, ವಕೀಲ ಹೇಳಿಕೆ ವಾಪಸ್ ಪಡೆದಿರಲಿಲ್ಲ.

ಈ ಬಗ್ಗೆ ವಿಚಾರಣೆ ನಡೆಸಿದ (5ನೇ ಪುಟಕ್ಕೆ)

# ಗಣರಾಜ್ಯೋತ್ಸವ ಪರೇಡ್ ಸ್ತಬ್ಧಚಿತ್ರದಲ್ಲಿ ಸಮಾನ ಅವಕಾಶ

## ಕರ್ನಾಟಕದ ಜೊತೆ ಚರ್ಚಿಸಿಯೇ ನಿರ್ಧರಿಸಲಾಗಿತ್ತು ಎಂದು ಸ್ಪಷ್ಟನೆ

ನವದೆಹಲಿ, ಜ. 10 – ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಎಲ್ಲ ರಾಜ್ಯಗಳಿಗೆ ಮುಂದಿನ ಮೂರು ವರ್ಷಗಳಲ್ಲಿ ಸಮಾನ ಅವಕಾಶ ನೀಡಲಾಗುವುದು. ಇದಕ್ಕಾಗಿ ರಾಜ್ಯಗಳ ಜೊತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಅವಕಾಶ ಸಿಗದಿರುವ ಬಗ್ಗೆ ಪಂಜಾಬ್ ಹಾಗೂ ಕರ್ನಾಟಕ ರಾಜ್ಯಗಳ ಮುಖ್ಯಮಂತ್ರಿಗಳು ಟೀಕಿಸುತ್ತಿರುವ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ಸ್ತಬ್ಧಚಿತ್ರಗಳ ಆಯ್ಕೆಗಾಗಿ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಅವರು ರಾಜ್ಯಗಳ ಹಿರಿಯ ಅಧಿಕಾರಿಗಳ ಜೊತೆ ಕಳೆದ ವರ್ಷ ಮೇ 25ರಂದು ಸಮಾಲೋಚನೆ ನಡೆಸಿದ್ದರು. ನಂತರ ಸ್ತಬ್ಧಚಿತ್ರಗಳಿಗಾಗಿ 3 ವರ್ಷಗಳ ಯೋಜನೆ ರೂಪಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಪರಿಣಿತರ ಸಮಿತಿ ನಾಲ್ಕು ಸುತ್ತಿನ ಸಭೆ ನಡೆಸಿ ಮೂರು ವರ್ಷಗಳ ಯೋಜನೆ ರೂಪಿಸಿತ್ತು. ಅದರಂತೆ ಪ್ರತಿ ವರ್ಷ 16 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರಗಳಿಗೆ (2ನೇ ಪುಟಕ್ಕೆ)

# ಶಿಂಧೆ ಬಣವೇ ನಿಜವಾದ ಶಿವಸೇನೆ ವಿಧಾನಸಭಾಧ್ಯಕ್ಷರ ತೀರ್ಮಾನ



ಮುಂಬೈ, ಜ. 10 – ಏಕನಾಥ ಶಿಂಧೆ ನೇತೃತ್ವದ ಬಣವೇ ನಿಜವಾದ ಶಿವಸೇನೆ ಎಂದು ಮಹಾರಾಷ್ಟ್ರ ವಿಧಾನಸಭಾಧ್ಯಕ್ಷ ರಾಹುಲ್ ನಾರ್ವೇಕರ್ ತೀರ್ಮಾನಿಸಿದ್ದಾರೆ. 2022ರ ಜೂನ್‌ನಲ್ಲಿ ಶಿವಸೇನೆ ಒಡೆದು ಎರಡು ಹೋಳಾಗಿತ್ತು.

ಶಿಂಧೆ ನೇತೃತ್ವದ ಸೇನಾ ಬಣ ಹಾಗೂ ಉದ್ಧವ್ ಠಾಕ್ರೆ ನೇತೃತ್ವದ ಬಣಗಳು ವಿರೋಧಿ ಬಣದ ಶಾಸಕರ ಅನರ್ಹತೆಗಾಗಿ ಅರ್ಜಿಗಳನ್ನು ದಾಖಲಿಸಿದ್ದವು. ಈ ಬಗ್ಗೆ ವಿಚಾರಣೆ ನಡೆಸಿದ ನಾರ್ವೇಕರ್, ಜೂನ್ 21, 2022ರಂದು ಶಿವಸೇನೆ (ಯು.ಬಿ.ಟಿ.) ಬಣದ ಸುನೀಲ್ ಪ್ರಭು ಸಚೇತಕರಾಗಿ ಉಳಿಯಲಿಲ್ಲ. ಅಂದು ಶಿಂಧೆ ಬಣದ ಭರತ್ ಗೊಗ್ವಾಲೆ ಅವರು (2ನೇ ಪುಟಕ್ಕೆ)

# ಅಯೋಧ್ಯೆ ಆಹ್ವಾನ 'ಗೌರವದಿಂದ ನಿರಾಕರಿಸಿದ' ಸೋನಿಯಾ, ಖರ್ಗೆ


**ರಾಮ ಮಂದಿರವನ್ನು ಬಿಜೆಪಿ, ಆರೆಸ್ಸೆಸ್ ಚುನಾವಣಾ ಲಾಭಕ್ಕೆ ಬಳಸಿಕೊಳ್ಳುತ್ತಿವೆ ಎಂದು ಆರೋಪ**

ನವದೆಹಲಿ, ಜ. 10 – ಅಯೋಧ್ಯೆಯ ರಾಮ ಮಂದಿರದ ಉದ್ಘಾಟನೆಗೆ ನೀಡಲಾಗಿದ್ದ ಆಹ್ವಾನವನ್ನು ಗೌರವದಿಂದ ನಿರಾಕರಿಸುವುದಾಗಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯಲ್ಲಿ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಹೇಳಿದ್ದಾರೆ.

ಚುನಾವಣಾ ಲಾಭಕ್ಕಾಗಿ ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು ರಾಮ ಮಂದಿರ ಉದ್ಘಾಟನೆಯನ್ನು ರಾಜಕೀಯ ಯೋಜನೆ ಮಾಡಿವೆ ಎಂದೂ ಅವರು ಆರೋಪಿಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಪಕ್ಷದ ನಾಯಕರ ಈ ನಿರ್ಧಾರ ತಿಳಿಸಿದ್ದಾರೆ. ಅಲ್ಲದೇ, ಬಿಜೆಪಿ ಹಾಗೂ ಆರ್.ಎಸ್.ಎಸ್. ನಾಯಕರು ಅಪೂರ್ಣಗೊಂಡಿರುವ (4ನೇ ಪುಟಕ್ಕೆ)

## ಅಭಿನಂದನೆಗಳು



ಶ್ರೀ ಆರ್.ಎಸ್. ಚನ್ನಬಸಪ್ಪ ಮತ್ತು ಶ್ರೀಮತಿ ಸರೋಜ ಚನ್ನಬಸಪ್ಪ
ವಿದ್ಯಾನಗರ, ದಾವಣಗೆರೆ ಇವರ ಮೊಮ್ಮಗಳು ಹಾಗೂ
ದಿ|| ಶ್ರೀಮತಿ ಆರ್.ಎಸ್. ವೇದಾ ಮತ್ತು ಹೆಚ್.ಎಂ.ಮಂಜುನಾಥ್
ಇವರ ಪುತ್ರಿ
**CA ಇಂಪನ ಹೆಚ್.ಎಂ.**
ಇವರು ಕಿರಿಯ ವಯಸ್ಸಿನಲ್ಲಿ CA ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ
ಇವರಿಗೆ ಹೃದಯ ಪೂರ್ವಕ ಅಭಿನಂದನೆಗಳು....
ಡಾ|| ಧನಂಜಯ್ ಆರ್.ಎಸ್
ಕನ್ಸಲ್ಟೆಂಟ್ ಕಾರ್ಡಿಯೋಲಜಿಸ್ಟ್, SS ನಾರಾಯಣ ಹೃದಯಾಲಯ, ದಾವಣಗೆರೆ
ಅಜ್ಜ-ಅಜ್ಜಿ : ಶ್ರೀ ಹೆಚ್.ಎಂ. ಮಲ್ಲಪ್ಪ ಮತ್ತು ಶ್ರೀಮತಿ ಮಂಗಳಮ್ಮ, ಶಿವಮೊಗ್ಗ

## ಕುಂದೂರು ಬಸವರಾಜಪ್ಪ ನಿಧನ



ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಕತ್ತಲಗೆರೆ ಗ್ರಾಮದ ವಾಸಿ
ಮಾಜಿ ಶಾಸಕರಾಗಿದ್ದ ದಿ|| ಕುಂದೂರು ರುದ್ರಪ್ಪ ಇವರ ದ್ವಿತೀಯ ಸುಪುತ್ರ
**ಶ್ರೀಯುತ ಕುಂದೂರು ಬಸವರಾಜಪ್ಪ**
ಅವರು, ದಿನಾಂಕ 11-01-2024ರ ಬುಧವಾರ ತಡರಾತ್ರಿ 12.49 ಗಂಟೆಗೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 84 ವರ್ಷ ವಯಸ್ಸಾಗಿತ್ತು.
ಮೃತರು ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11-01-2024ರ ಗುರುವಾರ ಮಧ್ಯಾಹ್ನ 2.30 ಗಂಟೆಗೆ
ಕತ್ತಲಗೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ : ಮಕ್ಕಳು, ಸಹೋದರರು ಮತ್ತು ಕುಟುಂಬ ವರ್ಗದವರು
ಕೆ.ಬಿ.ರಾಜೇಶ್ ಮತ್ತು ಕೆ.ಬಿ. ಮಹೇಶ್, ಶ್ರೀ ಆಂಜನೇಯ ಸ್ವಾಮಿ ಟ್ರೇಡರ್ಸ್, ಕತ್ತಲಗೆರೆ
ಮೊಬೈಲ್ : 9972 974741, 94837 69444

# 2,100 ಕೆ.ಜಿ. ಗಂಟೆ, 108 ಅಡಿಯ ಊದಿನ ಕಡ್ಡಿ

## ಅಯೋಧ್ಯೆಯ ರಾಮ ದೇವರಿಗೆ ವಿಶಿಷ್ಟ ರೀತಿಯಲ್ಲಿ ಭಕ್ತಿ ಸಮರ್ಪಣೆಗೆ ಸಿದ್ಧತೆ

ನವದೆಹಲಿ, ಜ. 10 – 108 ಅಡಿ ಉದ್ದದ ಊದಿನ ಕಡ್ಡಿ, 2,100 ಕೆಜಿ ತೂಕದ ಗಂಟೆ, 1,100 ಕೆಜಿ ತೂಕದ ದೀಪ, ಬಂಗಾರದ ಪಾದರಕ್ಷೆ, 10 ಅಡಿ ಎತ್ತರದ ಬೀಗ ಹಾಗೂ ಕೀಲಿ... ಇವುಗಳು ಎಂಟು ದೇಶಗಳಿಂದ ಅಯೋಧ್ಯೆಯ ರಾಮ ದೇವರಿಗೆ ಅರ್ಪಿಸಲು ಭಕ್ತಾದಿಗಳು ತಂದಿರುವ ವಿಶೇಷಗಳು.

ಜನವರಿ 22ರಂದು ರಾಮ ಮಂದಿರ ಉದ್ಘಾಟನೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಲಾವಿದರು ವಿಶಿಷ್ಟ ಕೊಡುಗೆಗಳನ್ನು ತರುತ್ತಿದ್ದಾರೆ. ದೇಶವಷ್ಟೇ ಅಲ್ಲದೇ, ವಿದೇಶದಿಂದಲೂ ವಿಶಿಷ್ಟ ಕಲಾಕೃತಿಗಳನ್ನು ದೇವರಿಗೆ ಅರ್ಪಣೆ ಮಾಡಲಾಗುತ್ತಿದೆ.

ನೇಪಾಳದಲ್ಲಿರುವ ಸೀತೆಯ ಜನ್ಮ ಸ್ಥಳವಾದ ಜನಕಪುರದಿಂದ 3 ಸಾವಿರಕ್ಕೂ ಹೆಚ್ಚು ಕೊಡುಗೆಗಳನ್ನು ಕಳಿಸಲಾಗುತ್ತಿದೆ. ಇವುಗಳಲ್ಲಿ ಬೆಳ್ಳಿ ಪಾದರಕ್ಷೆ, ಆಭರಣ ಹಾಗೂ ಬಟ್ಟೆಗಳು ಸೇರಿವೆ. ನೇಪಾಳದ ಜನಕಪುರ ಧಾಮ ರಾಮ - ಜಾನಕಿ ದೇವಾಲಯದಿಂದ 30 ವಾಹನಗಳಲ್ಲಿ ಇವುಗಳನ್ನು ಅಯೋಧ್ಯೆಗೆ ಈ ವಾರದಲ್ಲಿ ತರಲಾಗುವುದು.

ಶ್ರೀಲಂಕಾದ ನಿಯೋಗ ಅಲ್ಲಿನ ಅಶೋಕ ವಾಟಿಕಾದಿಂದ ಶಿಲೆಯೊಂದರ ಕೊಡುಗೆ ತರುತ್ತಿದೆ. ರಾವಣ ಸೀತೆಯನ್ನು ಅಪಹರಿಸಿ ಶ್ರೀಲಂಕಾದ ಅಶೋಕ ವಾಟಿಕಾದಲ್ಲಿ ಇರಿಸಿದ್ದ ಎಂದು ರಾಮಾಯಣದಲ್ಲಿ ತಿಳಿಸಲಾಗಿದೆ.

108 ಅಡಿ ಉದ್ದದ ಉದ್ದಿನ ಕಡ್ಡಿ ದೇವಾಲಯಕ್ಕೆ ಅರ್ಪಣೆ ಮಾಡಲಾಗುತ್ತಿದೆ. ಇದು 3,610 ಕೆಜಿ ತೂಕ ಹೊಂದಿದ್ದು, ಬಹುತೇಕ 3.5 ಅಡಿ ಅಗಲ ದ್ದಾಗಿದೆ. ಇದನ್ನು ಗುಜರಾತ್‌ನ ವಡೋದರದಲ್ಲಿ ಆರು ತಿಂಗಳಿನಿಂದ ಸಿದ್ಧಪಡಿಸಲಾಗಿದೆ.

ಇದು ಪರಿಸರಸ್ನೇಹಿಯಾಗಿದೆ ಹಾಗೂ ಸುಮಾರು ಒಂದೂವರೆ ತಿಂಗಳ ಕಾಲ ಉರಿಯಲಿದೆ. ಹಲವು ಕಿಲೋಮೀಟರ್‌ಗಳವರೆಗೆ ಪರಿಮಳ ಹರಡಲಿದೆ. ಇದು ಕುತುಬ್ ಮಿನಾರ್ ಎತ್ತರದ ಅರ್ಧದಷ್ಟಿದೆ ಎಂದು ಊದಿನಕಡ್ಡಿ ರೂಪಿಸಿರುವ ವಿಹಾ ಭಾರವಾಡ್ ಹೇಳಿದ್ದಾರೆ.

### 500ಕ್ಕೂ ಹೆಚ್ಚು ದೇವಾಲಯಗಳಲ್ಲಿ ವಸ್ತ್ರ ಸಂಹಿತೆ ಜಾರಿ ಭಾರತೀಯ ಸಂಸ್ಕೃತಿಯ ಉಡುಗೆ ಧರಿಸುವುದು ಕಡ್ಡಾಯ

ಬೆಂಗಳೂರು, ಜ. 10 – ರಾಜ್ಯದ 500ಕ್ಕೂ ಹೆಚ್ಚು ದೇವಾಲಯಗಳಲ್ಲಿ ವಸ್ತ್ರ ಸಂಹಿತೆಯನ್ನು ಜಾರಿಗೆ ತರಲು ಕರ್ನಾಟಕ ದೇವಸ್ಥಾನ- ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ ಮುಂದಾಗಿದೆ.

ಮುಜರಾಯಿ ಇಲಾಖೆಯಡಿ ಬರುವ ದೇವಾಲಯಗಳಲ್ಲೂ ವಸ್ತ್ರಸಂಹಿತೆ ಜಾರಿಗೆ ತರಬೇಕು ಎಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರನ್ನು ಮನವಿ ಮಾಡಿಕೊಳ್ಳಲೂ ಸಂಘ ನಿರ್ಧರಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಹಾಸಂಘದ ಸಂಚಾಲಕ ಮೋಹನ್ ಗೌಡ, ರಾಜ್ಯದ 500 ಕ್ಕೂ ಅಧಿಕ ದೇವಸ್ಥಾನಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಕಾರ ವಸ್ತ್ರ ಸಂಹಿತೆಜಾರಿಗೊಳಿಸುವನಿರ್ಣಯತೆಗೆದುಕೊಳ್ಳಲಾಗಿದೆ ಎಂದರು. ಮನೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ತಮಗೆ ಸೂಕ್ತವೆನಿಸಿದ ವಸ್ತ್ರಗಳನ್ನು ಧರಿಸಬಹುದು. ಆದರೆ, ದೇವಾಲಯಗಳಲ್ಲಿ ಈ ಸ್ವಾತಂತ್ರ್ಯ ಇರುವುದಿಲ್ಲ. ಇಲ್ಲಿ ಧರ್ಮವೇ ಮುಖ್ಯ ಎಂದು ಗೌಡ ಹೇಳಿದರು.

12 ಜ್ಯೋತಿರ್ಲಿಂಗಗಳಲ್ಲಿ ಒಂದಾದ ಉಜ್ಜೈನಿಯ ಮಹಾಕಾಲೇಶ್ವರ ದೇವಸ್ಥಾನ, ಮಹಾರಾಷ್ಟ್ರದ ಘೃಣೇಶ್ವರ ದೇವಸ್ಥಾನ, ವಾರಣಾಸಿಯ ಕಾಶಿ ವಿಶ್ವೇಶ್ವರ ದೇವಸ್ಥಾನ, ಆಂಧ್ರ ಪ್ರದೇಶದ ತಿರುಪತಿ ತಿಮ್ಮಪ್ಪನ ದೇವಸ್ಥಾನ, ಕೇರಳದ ಪದ್ಮನಾಭಸ್ವಾಮಿ ದೇವಸ್ಥಾನ ಹೀಗೆ ಕೆಲವು ಪ್ರಸಿದ್ಧ ದೇವಸ್ಥಾನಗಳಲ್ಲಿ ಅನೇಕ ವರ್ಷಗಳಿಂದ ಭಕ್ತರಿಗಾಗಿ ಸಾತ್ವಿಕ ವಸ್ತ್ರ ಸಂಹಿತೆ ಜಾರಿಯಿದೆ ಎಂದೂ ಅವರು ತಿಳಿಸಿದರು.

ಭಾರವಾಡ್ ಹಾಗೂ ಇತರೆ 25 ಭಕ್ತರು ವಡೋದರದಿಂದ ಈ ಬೃಹತ್ ಊದಿನ ಕಡ್ಡಿಯನ್ನು ಜನವರಿ 1ರಿಂದ ತರುತ್ತಿದ್ದಾರೆ. ಜನವರಿ 18ರಂದು ಈ ಊದಿನಕಡ್ಡಿ ಅಯೋಧ್ಯೆ ತಲುಪಲಿದೆ.

ಗುಜರಾತ್‌ನಿಂದ 44 ಅಡಿ ಉದ್ದದ ಹಿತ್ತಾಳೆಯ ಧ್ವಜ ಕಂಬ ಹಾಗೂ ಆರು ಇತರೆ ಸಣ್ಣ ಧ್ವಜ ಕಂಬಗಳನ್ನು ಕಳಿಸಲಾಗುತ್ತಿದೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಈ ಕಂಬಗಳನ್ನು ಸಾಗಿಸುವ ವಾಹನಗಳಿಗೆ ಹಸಿರು ನಿಶಾನೆ ತೋರಿಸಿದ್ದಾರೆ.

ಬಂಗಾರದ ಹೊದಿಕೆ ಹೊಂದಿರುವ ನಗಾರಿಯನ್ನು ಗುಜರಾತ್‌ನ ದರಿಯಾಪುರದ ಆಲ್ ಇಂಡಿಯಾ ದಬ್ಗಾರ್ ಸಮಾಜ ಕಳಿಸುತ್ತಿದೆ. ಇದನ್ನು ದೇವಾಲಯದ ಆವರಣದಲ್ಲಿ ಅಳವಡಿಸಲಾಗುವುದು.

ಉತ್ತರ ಪ್ರದೇಶದ ಅಲೀಘಡದ ಸತ್ಯ ಪ್ರಕಾಶ್ ಶರ್ಮ ಅವರು 400 ಕೆ.ಜಿ. ತೂಕದ ಬೀಗ ಹಾಗೂ ಕೀಲಿಯನ್ನು ರೂಪಿಸಿದ್ದಾರೆ. ಇದು ವಿಶ್ವದ ಅತಿ ದೊಡ್ಡ ಬೀಗ. ಇದನ್ನು ಸಾಂಕೇತಿಕವಾಗಿ ದೇವಾಲಯಕ್ಕೆ ಬಳಸಲಾಗುವುದು.

ಅಷ್ಟಧಾತುವಿನಿಂದ ನಿರ್ಮಿಸಲಾಗಿರುವ 2,100 ಕೆ.ಜಿ. ತೂಕದ ಗಂಟೆಯನ್ನು ಉತ್ತರ ಪ್ರದೇಶದ ಜಲೈಸರ್‌ನ ಎತಾದಲ್ಲಿ ರೂಪಿಸಲಾಗಿದೆ.

ಲಖ್ನೌದ ತರಕಾರಿ ವ್ಯಾಪಾರಿಗಳು ಎಂಟು ದೇಶಗಳ ಸಮಯವನ್ನು ಏಕಕಾಲಕ್ಕೆ ತೋರಿಸುವ 57 ಸೆಂ.ಮೀ. ಗಾತ್ರದ ಗಡಿಯಾರವನ್ನು ದೇವಾಲಯಕ್ಕೆ ಸಲ್ಲಿಸಿದ್ದಾರೆ.

ನಾಗಪುರದ ಅಡುಗೆ ಭಟ್ಟ ವಿಷ್ಣು ಮನೋಹರ್ ಅವರು 7 ಸಾವಿರ ಕೆ.ಜಿ. ತೂಕದ ರಾಮ ಹಲ್ವಾ ರೂಪಿಸಿ ಉದ್ಘಾಟನಾ ಸಮಾರಂಭಕ್ಕೆ ಕಳಿಸುತ್ತಿದ್ದಾರೆ. ಅಯೋಧ್ಯೆಯಲ್ಲಿ ನಡೆಯಲಿರುವ ಯಜ್ಞಕ್ಕಾಗಿ ಮಥುರಾದ ಶ್ರೀ ಕೃಷ್ಣ ಜನ್ಮಸ್ಥಾನ ಸೇವಾ ಸಂಸ್ಥಾನದಿಂದ 200 ಕೆ.ಜಿ. ಲಾಡು ಕಳಿಸಲಾಗುತ್ತಿದೆ.

ತಿರುಪತಿ ತಿಮ್ಮಪ್ಪ ದೇವಾಲಯದ ಟ್ರಸ್ಟ್ ವತಿಯಿಂದ ಲಕ್ಷ ಲಡ್ಡುಗಳನ್ನು ಉದ್ಘಾಟನಾ ದಿನಕ್ಕಾಗಿ ಕಳಿಸಲಾಗುತ್ತಿದೆ.

ಗುಜರಾತ್‌ನ ಸೂರತ್ ನಗರದ ನೇಕಾರರು ಶ್ರೀರಾಮ ಹಾಗೂ ಅಯೋಧ್ಯೆ ದೇವಾಲಯ ಚಿತ್ರ ಇರುವ ಸೀರೆಗಳನ್ನು ಸಿದ್ಧಪಡಿಸುತ್ತಿದ್ದಾರೆ. ಮೊದಲ ಸೀರೆಯನ್ನು ಸೀತಾ ಮಾತೆಗೆ ಅರ್ಪಿಸಲು ಕಳಿಸುತ್ತಿದ್ದಾರೆ.

ಸೂರತ್‌ನ ವಜ್ರದ ವ್ಯಾಪಾರಿಯೊಬ್ಬರು 5 ಸಾವಿರ ಅಮೆರಿಕದ ವಜ್ರ ಹಾಗೂ 2 ಕೆ.ಜಿ. ಬೆಳ್ಳಿ ಹೊಂದಿದ ರಾಮ ದೇವಾಲಯದ ಮಾದರಿಯನ್ನು ನಿರ್ಮಿಸಿದ್ದಾರೆ. ಇದನ್ನು 40 ಕಲಾವಿದರು 35 ದಿನಗಳಲ್ಲಿ ರೂಪಿಸಿದ್ದಾರೆ. ಇದರ ಜೊತೆಗೆ ಕಂಠಿಹಾರವನ್ನೂ ರಾಮ ದೇವಾಲಯಕ್ಕೆ ಕಳಿಸಲಾಗುತ್ತಿದೆ.

ಹೈದರಾಬಾದ್‌ನ 64 ವರ್ಷದ ಚಲ್ಲ ಶ್ರೀನಿವಾಸ ಶಾಸ್ತ್ರಿ ಅವರು ಕಾಲ್ನಡಿಗೆಯಲ್ಲಿ 8 ಸಾವಿರ ಕಿ.ಮೀ. ನಡೆದು ಬಂದು ಬಂಗಾರದ ಪಾದುಕೆಗಳನ್ನು ದೇವರಿಗೆ ಅರ್ಪಿಸುತ್ತಿದ್ದಾರೆ.

ವಡೋದರದ ಅರವಿಂದಭಾಯಿ ಮಂಗಳಭಾಯಿ ಪಟೇಲ್ ಅವರು 1,100 ಕೆ.ಜಿ. ತೂಕದ ಬೃಹತ್ ದೀಪವನ್ನು ದೇವರಿಗೆ ಅರ್ಪಿಸುತ್ತಿದ್ದಾರೆ. ಇದು 9.25 ಅಡಿ ಎತ್ತರ ಹಾಗೂ 8 ಅಡಿ ಅಗಲದ್ದಾಗಿದೆ. ಇದು 851 ಕೆ.ಜಿ. ತುಪ್ಪ ಹಿಡಿಯುವಷ್ಟು ದೊಡ್ಡದಿದೆ. ದೀಪವನ್ನು ಪಂಚಧಾತುಗಳಿಂದ ಮಾಡಲಾಗಿದೆ ಎಂದು ಪಟೇಲ್ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಕನ್ನೌಜ್‌ನ ಸುಗಂಧ ಉತ್ಪಾದಕರು ರಾಮ ದೇವರಿಗಾಗಿ ವಿಶೇಷ ಸುಗಂಧ ರೂಪಿಸಿದ್ದಾರೆ. ಇದರ ಜೊತೆಗೆ ಚಳಿಯಿಂದ ರಕ್ಷಣೆ ನೀಡುವ ಅತ್ತರ್ ಶಮಾಮಾ ಅನ್ನೂ ಸಿದ್ಧಪಡಿಸಿದ್ದಾರೆ.

# ಕಲ್ಯಾಣ ಕರ್ನಾಟಕಕ್ಕೆ ಮೀಸಲಾದ ಅನುದಾನದ ಹಣ ಸದುಪಯೋಗವಾಗಲಿ



**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಹೂವಿನಹಡಗಲಿಯ ಜಿ.ಬಿ.ಆರ್ ಕಾಲೇಜು ಪ್ರಾಂಶುಪಾಲ ಪ್ರೊ. ಎಸ್. ಎಸ್. ಪಾಟೀಲ್**

ಹರಪನಹಳ್ಳಿ, ಜ.10- ಕಲ್ಯಾಣ ಕರ್ನಾಟಕಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅಭಿವೃದ್ಧಿ ಯೋಜನೆಯ ಹಣಕಾಸನ್ನು ಸಂಪೂರ್ಣವಾಗಿ ಬಳಸಿಕೊಂಡು ತಾಲ್ಲೂಕುಗಳ ಅಭಿವೃದ್ಧಿಗೆ ರಾಜಕೀಯ ವ್ಯಕ್ತಿಗಳು ಶ್ರಮಿಸಬೇಕೆಂದು ಹೂವಿನಹಡಗಲಿಯ ಜಿ. ಬಿ. ಆರ್. ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ. ಎಸ್. ಎಸ್. ಪಾಟೀಲ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಿನ್ನೆ ಏರ್ಪಡಿಸಿದ್ದ ಕಲ್ಯಾಣ ಕರ್ನಾಟಕದ ಆರ್ಥಿಕ ಸ್ಥಿತಿಗತಿ ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಕಲ್ಯಾಣ ಕರ್ನಾಟಕದಲ್ಲಿರುವ ಉಪಯೋಗಗಳನ್ನು ಉನ್ನತ ಶಿಕ್ಷಣಕ್ಕೆ ಇರುವ ಅವಕಾಶಗಳನ್ನು ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕಲ್ಯಾಣ ಕರ್ನಾಟಕದ ನಿಧಿ ಮತ್ತು ಆರ್ಥಿಕ ಯೋಜನೆಗಳನ್ನು ಸದು ಪಯೋಗಪಡಿಸಿಕೊಳ್ಳಬೇಕು. ಬೀದರ್, ಕಲಬುರ್ಗಿ, ಯಾದಗಿರಿ ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳು ಹಾಗೂ ಅವುಗಳಿಗೆ ಇರುವ ಕಲ್ಯಾಣ ಕರ್ನಾಟಕದ ಮೀಸಲಾತಿ ಅವಕಾಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಪದವಿಗೆ ತಮ್ಮ ಶಿಕ್ಷಣವನ್ನು ಮೊಟಕುಗೊಳಿಸದೇ ಉನ್ನತ ಶಿಕ್ಷಣಗಳಾದ ಎಂ.ಎ, ಪಿಹೆಚ್.ಡಿ, ಮತ್ತು ಸಂಶೋಧನಾ ಅಧ್ಯಯನದ ಮೂಲಕ ಕಾಲೇಜು ಹಾಗೂ ಪೋಷಕರಿಗೆ ಕೀರ್ತಿ ತರಬೇಕು ಎಂದರು.

ಪ್ರಸಕ್ತ ಸಾಲಿನಲ್ಲಿ 750 ಕೋಟಿ ಹಣ ಬಿಡುಗಡೆಯಾಗಿದ್ದು, ಅದಕ್ಕೆ ಸಂಪೂರ್ಣ ಕ್ರಿಯಾ ಯೋಜನೆಗಳು ಸಿದ್ದವಾಗದಿರುವುದು ಅಸಮಾಧಾನ ತಂದಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎಸ್. ಷಣ್ಮುಖಗೌಡ ಮಾತನಾಡಿ, ಉತ್ಪಾದನೆ, ಸೇವೆಗಳು ಮತ್ತು ತಂತ್ರಜ್ಞಾನದಂತಹ ಕ್ಷೇತ್ರಗಳನ್ನು ಉತ್ತೇಜಿಸುವ ಮೂಲಕ ಆರ್ಥಿಕತೆಯ ವೈವಿಧ್ಯೀಕರಣವನ್ನು ಉತ್ತೇಜಿಸುವುದು ಸಾಂಪ್ರದಾಯಿಕ ವಲಯಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಆದಾಯದ ಹೊಸ ಮೂಲಗಳನ್ನು ಸೃಷ್ಟಿಸುತ್ತದೆ. ಇದು ಉದ್ಯೋಗ ಸೃಷ್ಟಿ ಮತ್ತು ಆದಾಯ ಉತ್ಪಾದನೆಗೆ ಕಾರಣವಾಗಬಹುದು, ಒಟ್ಟಾರೆ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತದೆ ಎಂದರು.

ಐಕ್ಯೂಎಸ್‌ಸಿ ಸಂಚಾಲಕರಾದ ಪುನೀತ್ ರಾಜ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಹರಾಳ್ ಬುಳ್ಳಪ್ಪ, ಡಾ. ಸತೀಶ್ ಕೆ, ನಾಗರಾಜ ಎನ್ ಎಮ್, ಕ್ರೀಡಾಧಿಕಾರಿ ಕೊಟ್ರೇಶ್, ಸಹಾಯಕ ಪ್ರಾಧ್ಯಾಪಕರಾದ ವೀರೇಶ್, ಬಾಲಾಜಿ , ಭಾಷಾ ಮತ್ತಿತರರು ಭಾಗವಹಿಸಿದ್ದರು.

## ಚುನಾವಣೆ ಹಿನ್ನೆಲೆ: ಬಿಜೆಪಿ, ಕಾಂಗ್ರೆಸ್ ಮುಖಂಡರ ಸಭೆ

ಬೆಂಗಳೂರು, ಜ. 10 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಸ್ಥಾನಗಳನ್ನು ಬಾಚಿಕೊಳ್ಳಬೇಕೆಂಬ ಉತ್ಸಾಹದಲ್ಲಿ ಇಂದು ಇಡೀ ದಿನ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ಗಹನವಾದ ಚರ್ಚೆ ನಡೆಸಿದವು.

ಕಾಂಗ್ರೆಸ್ 28ರ ಪೈಕಿ ಕನಿಷ್ಠ 26 ಸ್ಥಾನಗಳಲ್ಲಿ ಗೆಲ್ಲಲೇಬೇಕೆಂಬ ಗುರಿ ಹಾಕಿಕೊಂಡಿದ್ದರೆ, ಬಿಜೆಪಿ ತನ್ನ ಮೈತ್ರಿ ಪಕ್ಷ ಜೆಡಿಎಸ್ ಜೊತೆಗೂಡಿ ಎಲ್ಲಾ 28 ಸ್ಥಾನಗಳನ್ನೂ ಗೆಲ್ಲಲೇಬೇಕು ಎಂಬ ಹಠದೊಂದಿಗೆ ಮುಖಂಡರು ಮತ್ತು ಕಾರ್ಯಕರ್ತರನ್ನು ಹುರಿದುಂಬಿಸುವ ಕಾರ್ಯಕ್ಕೆ ಇಂದಿಲ್ಲಿ ಚಾಲನೆ ನೀಡಿದವು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಇಂದು ಇಡೀ ದಿನ ಜಿಲ್ಲಾ ಅಧ್ಯಕ್ಷರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತವರು, ಶಾಸಕರು ಹಾಗೂ ಸಚಿವರ ಜೊತೆ ಪ್ರತ್ಯೇಕ ಸಭೆಗಳನ್ನು ನಡೆಸಿ ಸಲಹೆ-ಸೂಚನೆಗಳನ್ನು ಪಡೆದುಕೊಂಡಿದ್ದಾರೆ.

ಸರ್ಕಾರ ಅನುಷ್ಠಾನಕ್ಕೆ ತಂದಿರುವ ಐದು ಗ್ಯಾರಂಟಿಗಳೇ ಲೋಕಸಭಾ ಚುನಾವಣಾ ಅಸ್ತ್ರಗಳಾಗಿದ್ದು, ಇವುಗಳಿಗೆ ಕೆಳಹಂತದಲ್ಲಿ ಆದ್ಯತೆ ನೀಡಲು ಮುಂದಾಗಬೇಕು. ಚುನಾವಣೆಗೂ ಮುನ್ನವೇ ಪ್ರತಿ ಜಿಲ್ಲೆಯಲ್ಲೂ ಫಲಾನುಭವಿಗಳ ಸಭೆ ನಡೆಸಬೇಕು, ಸಭೆಗೆ ಪ್ರತಿ ಪಂಚಾಯತ್‌ನಿಂದ 100 ಫಲಾನುಭವಿಗಳನ್ನು ಕರೆತರುವಂತೆ ಸೂಚಿಸಿದರು.

ಇನ್ನೊಂದೆಡೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ 13 ಲೋಕಸಭಾ ಕ್ಷೇತ್ರಗಳ ಗೆಲುವಿನ ಬಗ್ಗೆ ಗಂಭೀರ ಚರ್ಚೆ ನಡೆಸಿತು.

ಬೆಳಗ್ಗೆಯಿಂದ ಸಂಜೆವರೆಗೆ ತಲಾ ನಾಲ್ಕು ಜಿಲ್ಲೆಗಳ ಒಂದು ಗುಂಪಿನಂತೆ ಸಭೆಗಳನ್ನು ನಡೆಸಲಾಯಿತು.

ಆಡಳಿತಾರೂಢ ಕಾಂಗ್ರೆಸ್ ವೈಫಲ್ಯಗಳನ್ನು ಜನರಿಗೆ ತಿಳಿಹೇಳಬೇಕು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನಪರ ಯೋಜನೆಗಳ ಪ್ರಯೋಜನಗಳನ್ನು ಮನೆ-ಮನೆಗೆ ತಲುಪಿಸುವ ಕೆಲಸ ಆಗಬೇಕು ಎಂದು ಸೂಚಿಸಲಾಯಿತು.

## ಪ್ರತಿಮೆ ಪ್ರತಿಷ್ಠಾಪನೆ ವಿವಾದ : ಭಾನುವಳ್ಳಿಯಲ್ಲಿ ಮುಂದುವರೆದ ಪ್ರತಿಭಟನೆ

ಮಲೇಬೆನ್ನೂರು, ಜ.10- ಭಾನುವಳ್ಳಿ ಗ್ರಾಮದ ವಾಲ್ಮೀಕಿ ವೃತ್ತದ ಪಕ್ಕದಲ್ಲೇ ರಾತ್ರೋರಾತ್ರಿ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಪ್ರತಿಷ್ಠಾಪಿಸಿರುವುದನ್ನು ಖಂಡಿಸಿ, ವಾಲ್ಮೀಕಿ ವೃತ್ತದಲ್ಲಿ ನಡೆಸುತ್ತಿರುವ ಧರಣಿ - ಪ್ರತಿಭಟನೆ ಬುಧವಾರವೂ ಮುಂದುವರಿಯಿತು.

ಮಂಗಳವಾರ ಗ್ರಾ.ಪಂ. ಕಚೇರಿಯಲ್ಲಿ ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಮತ್ತು ಡಿವೈಎಸ್ಪಿ ಬಸವರಾಜ್ ಅವರು ನಡೆಸಿದ ಎರಡು ಸಮಾಜದವರ ಸಂಧಾನ ಸಭೆ ವಿಫಲವಾದ ಹಿನ್ನೆಲೆಯಲ್ಲಿ ಜ.12ಕ್ಕೆ ಡಿಸಿ, ಎಸ್ಪಿ ಅವರು ಗ್ರಾಮಕ್ಕೆ ಭೇಟಿ ನೀಡುವುದಾಗಿ ತಿಳಿಸಿದ್ದಾರೆ ಎಂದು ಹೇಳಲಾಗಿದೆ.

ಮಂಗಳವಾರ ರಾತ್ರಿ ಧರಣಿ ಸ್ಥಳದಲ್ಲಿಯೇ ಮಲಗಿದ್ದ ನಾಯಕ ಸಮಾಜ ದವರು ಬುಧವಾರ ಇಡೀ ದಿನ ಧರಣಿ ನಡೆಸಿ, ರಾತ್ರಿ ಅಲ್ಲಿಯೇ ಮಲಗಿದ್ದಾರೆ.

ಸ್ಥಳಕ್ಕೆ ಪಿಎಸ್ಐ ಪ್ರಭು ಕೆಳಗಿನಮನಿ ಭೇಟಿ ನೀಡಿ, ಭದ್ರತೆ ಪರಿಶೀಲಿಸಿದರು. ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಬ್ಯಾರಿಕೇಡ್ ಅಳವಡಿಸಿದ್ದು, ಸಿಸಿಟಿವಿ ಕ್ಯಾಮರಾವನ್ನೂ ಹಾಕಲಾಗಿದೆ. ಹರಿಹರ ತಾ.ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಕೆ.ಬಿ.ಮಂಜುನಾಥ್, ಹರಿಹರ ನಗರಸಭೆ ಸದಸ್ಯ ದಿನೇಶ್ ಬಾಬು, ಮಕರಿ ಪಾಲಾಕ್ಷಪ್ಪ, ಹಂಚಿನ ದೇವೇಂದ್ರಪ್ಪ, ಭರತ್ ಸೇರಿದಂತೆ ಇನ್ನೂ ಅನೇಕರು ಆಗಮಿಸಿ, ಧರಣಿಗೆ ಬೆಂಬಲ ವ್ಯಕ್ತಪಡಿಸಿದರು.

ಗ್ರಾ.ಪಂ. ಸದಸ್ಯರಾದ ಗಿರಿಜಮ್ಮ ಜಯ್ಯಪ್ಪ, ಶಿವಬೆಳಕೊಂಡರ, ಟಿ.ಪಿ.ಧನ್ಯಕುಮಾರ್, ಮುಖಂಡರಾದ ಸಿದ್ದಪ್ಪ ದೊಡ್ಡಮನಿ, ಟಿ.ಪುಟ್ಟಪ್ಪ, ಮಹಾಂತೇಶ್ ಕಮಲಾಪುರ, ಕರಿಬಸಪ್ಪ ದೊಡ್ಡಮನಿ, ಕಡೇಮನಿ ನಾಗರಾಜ್, ಶ್ರೀನಿವಾಸ್, ಲಕ್ಷ್ಮಪ್ಪ, ಎಸ್. ಮಂಜುನಾಥ್, ಪತ್ತೇಪುರದ ಮಹೇಶ್ವರಪ್ಪ ಸೇರಿದಂತೆ ಮಹಿಳೆಯರು, ಯುವಕರು ಧರಣಿಯಲ್ಲಿ ಭಾಗವಹಿಸಿದ್ದರು.

## ಕೆ.ಬೇವಿನಹಳ್ಳಿಯಲ್ಲಿ ರಥೋತ್ಸವ



ಮಲೇಬೆನ್ನೂರು, ಜ.10- ಕೆ. ಬೇವಿನಹಳ್ಳಿ ಗ್ರಾಮದಲ್ಲಿ ಮಹೇಶ್ವರ ಸ್ವಾಮಿ ಜಾತ್ರೆ ಪ್ರಯುಕ್ತ ಬುಧವಾರ ಸಂಜೆ ಶ್ರೀ ಬಸವೇಶ್ವರ ಮತ್ತು ಬಾತಿ ಸಿದ್ದೇಶ್ವರ ದೇವರ ರಥೋತ್ಸವವು ಶ್ರೀ ಕಾಶಿ ವಿಶ್ವನಾಥ ಹಾಗೂ ಬಾತಿ ಬೀರಲಿಂಗೇಶ್ವರ ಸ್ವಾಮಿಯ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ರಥೋತ್ಸವದಲ್ಲಿ ಶಾಸಕ ಬಿ.ಪಿ. ಹರೀಶ್ ಸೇರಿದಂತೆ, ಅಪಾರ ಭಕ್ತರು ಭಾಗ ವಹಿಸಿದ್ದರು. ರಾತ್ರಿ ಗ್ರಾಮದ ಶ್ರೀ ಮಹೇಶ್ವರ ಕಲಾ ಕುಸುಮ ನಾಟ್ಯ ಸಂಘದ ಕಲಾವಿದರಿಂದ ಪ್ರದರ್ಶನಗೊಂಡ 'ಬಡವನ ಸಾಮ್ರಾಜ್ಯದಲ್ಲಿ ಸೊಕ್ಕಿನ ಶ್ರೀಮಂತರು' ಅರ್ಥಾತ್ 'ರೊಚ್ಚಿಗೆದ್ದ ರಣಧೀರ' ನಾಟಕ ಕಲಾಭಿಮಾನಿಗಳ ಗಮನ ಸೆಳೆಯಿತು.

## ಪರೇಡ್ ಸ್ತಬ್ಧಚಿತ್ರದಲ್ಲಿ ಸಮಾನ ಅವಕಾಶ

(1ನೇ ಪುಟದಿಂದ) ಸರದಿಯಂತೆ ಗಣರಾಜ್ಯೋತ್ಸವದಲ್ಲಿ ಅವಕಾಶ ನೀಡಲಾಗುವುದು.

ಸ್ತಬ್ಧಚಿತ್ರಗಳ ಆಯ್ಕೆಯನ್ನು ಪಾರದರ್ಶಕ ಹಾಗೂ ಸಲಹಾತ್ಮಕ ಸ್ವರೂಪದಲ್ಲಿ ನಡೆಸಲಾಗಿದೆ. ಎಲ್ಲಾ ರಾಜ್ಯಗಳಿಗೆ ಸಮಾನ ಅವಕಾಶ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಬಾರಿ ಪ್ರತಿಪಕ್ಷಗಳ ಆಡಳಿತ ಇರುವ ಜಾರ್ಖಂಡ್, ಒಡಿಶಾ, ಆಂಧ್ರ ಪ್ರದೇಶ, ತಮಿಳುನಾಡು, ತೆಲಂಗಾಣ ಹಾಗೂ ಮೇಘಾಲಯಗಳಿಗೆ ಅವಕಾಶ ದೊರೆತಿದೆ. ಮತ್ತೊಂದೆಡೆ ಉತ್ತರಾಖಂಡ ಹಾಗೂ ಗೋವಾಗಳು ಆಯ್ಕೆಯಾಗಿಲ್ಲ ಎಂದೂ ಮೂಲಗಳು ತಿಳಿಸಿವೆ.

ಈ ಸರದಿ ವ್ಯವಸ್ಥೆಗೆ ಕರ್ನಾಟಕ ಸೇರಿದಂತೆ 28 ರಾಜ್ಯಗಳು ಸಮ್ಮತಿಸಿವೆ. ಈ ಒಡಂಬಡಿಕೆಯ ಅನ್ವಯ ಕರ್ನಾಟಕ, ಹಿಮಾಚಲ ಪ್ರದೇಶ, ತ್ರಿಪುರ, ಜಮ್ಮು ಮತ್ತು ಕಾಶ್ಮೀರ, ಗೋವಾ, ಅಸ್ಸಾಂ ಹಾಗೂ ಉತ್ತರಾಖಂಡಗಳ ಸ್ತಬ್ಧಚಿತ್ರಗಳು ಕೆಂಪು ಕೋಟೆಯಲ್ಲಿ ನಡೆಯಲಿರುವ ಭಾರತ ಪರ್ವದಲ್ಲಿ ಭಾಗಿಯಾಗಲಿವೆ ಎಂದು ಮೂಲಗಳು ತಿಳಿಸಿವೆ.

## ಹರಪನಹಳ್ಳಿ : ಕನಕದಾಸರ ಜಯಂತಿ ಹಾಗೂ ಪುರಸ್ಕಾರ

ಹರಪನಹಳ್ಳಿ, ಜ. 10 - ಪಟ್ಟಣದ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಕನಕದಾಸರ ಜಯಂತ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು. ಪರೀಕ್ಷೆಯನ್ನು ಹೆಚ್ಚು ಅಂಕ ಗಳಿಸಿದ ಕುರುಬ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.



## ಹತ್ಯೆ ಪ್ರಕರಣದಿಂದ ಕೇಂದ್ರ ಸಚಿವ ದೋಷಮುಕ್ತ

ನವದೆಹಲಿ, ಜ. 10 – ಹತ್ಯೆ ಪ್ರಕರಣದಿಂದ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ದೋಷ ಮುಕ್ತಗೊಳಿಸುವ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. 2000ದಲ್ಲಿ ಉತ್ತರ ಪ್ರದೇಶದ ಲಖೀಂಪುರ ಖೇರಿ ಜಿಲ್ಲೆಯಲ್ಲಿ ಪ್ರಭಾತ್ ಗುಪ್ತ ಹತ್ಯೆ ಮಾಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ದೋಷಮುಕ್ತಗೊಳಿಸುವ ತೀರ್ಪು ನೀಡಿತ್ತು. ಈ ತೀರ್ಪಿನ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ವಿಚಾರಣಾ ನ್ಯಾಯಾಲಯ ಹಾಗೂ ಹೈಕೋರ್ಟ್ ನೀಡಿರುವ ತೀರ್ಪಿನಲ್ಲಿ ಮಧ್ಯ ಪ್ರವೇಶಿಸಲು ಬಯಸುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ ಹೇಳಿದೆ.



ಚಿರಸ್ಮರಣೆ
ಶ್ರೀಮತಿ ಕಲ್ಲಮ್ಮನವರು
ನಿಧನ: 11-01-1994
ತಾವು ನಮ್ಮನ್ನಗಲಿ ಇಂದಿಗೆ 30 ವರ್ಷಗಳಾದವು. ತಾವು ಹಾಕಿ ಕೊಟ್ಟ ಸನ್ಮಾರ್ಗ, ಸನ್ನಡತೆ ಹಾಗೂ ಸದಾ ತಮ್ಮ ನೆನಪಿನಲ್ಲಿರುವ:
ತಮ್ಮ ಪತಿ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.


## ಸಂಚಾಲಕನ ಆಯ್ಕೆ ಮಾಡಿಕೊಳ್ಳಲಾಗದ ಐಎನ್‌ಡಿಐಎ : ಸಚಿವ ಪುರಿ

ಬೆಂಗಳೂರು, ಜ. 10 - ಎನ್‌ಡಿಎ ಸರ್ಕಾರದ ಕಾರ್ಯಕ್ರಮಗಳನ್ನು ಟೀಕಿಸುವ ವಿಪಕ್ಷಗಳ ಐ.ಎನ್.ಡಿ.ಐ.ಎ ಒಕ್ಕೂಟ ತನ್ನ ಸಂಚಾಲಕರನ್ನೇ ಆಯ್ಕೆ ಮಾಡಲಾಗುತ್ತಿಲ್ಲ ಎಂದು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಇಂದಿಲ್ಲಿ ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಗೆ ಸ್ಥಾನ ಹಂಚಿಕೆಯೇ ವಿಪಕ್ಷಗಳ ಒಕ್ಕೂಟಕ್ಕೆ ಸಾಧ್ಯವಾಗುತ್ತಿಲ್ಲ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದು, ಜಿಡಿಪಿ ದರ ಶೇ 7.6 ಮೀರಿದೆ ಎಂದು ಹೇಳಿದರು.

ಬರುವ ಮೇ ವೇಳೆಗೆ 45 ಸಾವಿರ ಬ್ಯಾರೆಲ್ ಕಚ್ಚಾ ತೈಲ ಹಾಗೂ ಶೇ. 7ರಷ್ಟು ಗ್ಯಾಸ್ ಉತ್ಪಾದನೆ ಮಾಡಲಿದೆ, 2016ರಲ್ಲಿ ಆರಂಭವಾದ ಉಜ್ವಲ ಯೋಜನೆಯಡಿ 10.50 ಕೋಟಿ ಕುಟುಂಬಕ್ಕೆ ಉಚಿತ ಅಡುಗೆ ಅನಿಲ (ಎಲ್‌ಪಿಜಿ) ಸಂಪರ್ಕ ಒದಗಿಸಲಾಗಿದೆ, ದೇಶದಲ್ಲಿ 2014ರಲ್ಲಿದ್ದ 14 ಕೋಟಿ ಅಡುಗೆ ಅನಿಲ ಸಂಪರ್ಕ ಇಂದು 32 ಕೋಟಿಗೆ ಏರಿಕೆಯಾಗಿದೆ, ಕಂಪ್ರೆಸ್ಡ್ ಬಯೋಗ್ಯಾಸ್ ಸೌಲಭ್ಯವನ್ನೂ ನೀಡಲಾಗಿದೆ ಎಂದು ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯಾಗುತ್ತಿದ್ದರೂ, ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಳೆದ 2 ವರ್ಷಗಳಲ್ಲಿ ಕಡಿಮೆ ಆಗಿದೆ, ಪೆಟ್ರೋಲಿಯಂ ಉತ್ಪನ್ನಗಳ ಎಕ್ಸೈಸ್ ಸುಂಕ ಕಡಿಮೆ ಮಾಡಲಾಗಿದೆ ಎಂದರು.

11 ಕೋಟಿ ಶೌಚಾಲಯ ನಿರ್ಮಿಸಲಾಗಿದೆ, ಆವಾಸ್ ಯೋಜನೆಯಡಿ ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ, ಮಹಿಳೆಯರಿಗೆ ಶೇ. 33 ರಾಜಕೀಯ ಮೀಸಲಾತಿ ಕೊಡುವ ನಿರ್ಧಾರವನ್ನು ಎನ್‌ಡಿಎ ಸರ್ಕಾರ ಕೈಗೊಂಡಿದೆ ಎಂದು ಹೇಳಿದರು.

### ಶಿಂಧೆ ಬಣವೇ ನಿಜವಾದ ಶಿವಸೇನೆ ವಿಧಾನಸಭಾಧ್ಯಕ್ಷರ ತೀರ್ಮಾನ

(1ನೇ ಪುಟದಿಂದ) ಅಧಿಕೃತ ಸಚೇತಕರಾದರು ಎಂದಿದ್ದಾರೆ. ಶಾಸಕರ ಅನರ್ಹತೆಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ತಳ್ಳಿ ಹಾಕಲಾಗಿದೆ. ಯಾವ ಶಾಸಕನೂ ಅನರ್ಹನಾಗುವುದಿಲ್ಲ ಎಂದೂ ನಾರ್ವೇಕರ್ ಹೇಳಿದ್ದಾರೆ. ವಿಧಾನಸಭಾಧ್ಯಕ್ಷರ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗುವುದು ಎಂದು ಶಿವಸೇನೆ (ಯು.ಬಿ.ಟಿ.) ಬಣದ ನಾಯಕರಾದ ಸಂಜಯ್ ರಾವತ್ ಹಾಗೂ ಆದಿತ್ಯ ಠಾಕ್ರೆ ಹೇಳಿದ್ದಾರೆ.

## ಕುಣೆಬೆಳಕೆರೆ : ನಿಶಕ್ತಳಾದ ವೃದ್ಧೆ ; ಆಸ್ಪತ್ರೆಗೆ ದಾಖಲು

ಮಲೇಬೆನ್ನೂರು, ಜ.10- ಸರಿಯಾದ ಊಟ, ವಸತಿ ವ್ಯವಸ್ಥೆ ಇಲ್ಲದೇ ಅನಾಥೆಯಂತೆ ಬಸ್ ನಿಲ್ದಾಣದಲ್ಲಿ ನಿಶ್ಯಕ್ತಿಯಾಗಿ ಮಲಗಿದ್ದ 74 ವರ್ಷದ ವೃದ್ಧ ಮಹಿಳೆಯನ್ನು ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಗ್ರಾ.ಪಂ. ನವರು ಸೇರಿ ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿರುವ ಘಟನೆ ಕುಣೆಬೆಳಕೆರೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ.



ಗ್ರಾಮದ ಗಿರಿಜಮ್ಮ ಶಿವಪ್ಪ ಎಂಬ ಮಹಿಳೆಗೆ ಗಂಡ, ಮಕ್ಕಳು ಇಲ್ಲದೇ ಒಬ್ಬಂಟಿಯಾಗಿದ್ದರು. ಇತ್ತೀಚೆಗೆ ಊಟ, ವಸತಿ ವ್ಯವಸ್ಥೆ ಸರಿಯಾಗಿರದ ಕಾರಣ ಮತ್ತು ಕಾಲಿಗೆ ಪೆಟ್ಟಾಗಿ ನಡೆದಾಡಲು ಸಾಧ್ಯವಾಗದ ಈ ಮಹಿಳೆ ತೆವಳುತ್ತಾ ಬಸ್ ನಿಲ್ದಾಣದಲ್ಲಿದ್ದರು ಎನ್ನಲಾಗಿದೆ. ಅಲ್ಲದೇ, ಈ ಮಹಿಳೆಗೆ ಕಂದಾಯ ಇಲಾಖೆಯಿಂದ ವೃದ್ಧಾಪ್ಯ ವೇತನವನ್ನು ನೀಡಲಾಗುತ್ತಿದೆ. ಆದರೆ, ಇವರನ್ನು ಪೋಷಣೆ ಮಾಡುವವರು ಇಲ್ಲದ ಕಾರಣ ಮೈಯ್ಯಲ್ಲಿ ಶಕ್ತಿ ಇಲ್ಲದಂತಾಗಿ ಬಸ್ ನಿಲ್ದಾಣದಲ್ಲಿ ಆಶ್ರಯ ಪಡೆದಿದ್ದರು. ಇದನ್ನು ಗಮನಿಸಿದ ಗ್ರಾಮಸ್ಥರು ಉಪತಹಶೀಲ್ದಾರ್ ಆರ್.ರವಿ ಅವರಿಗೆ ತಿಳಿಸಿದಾಗ, ರವಿ ಅವರು ಸ್ಥಳಕ್ಕೆ ಆಗಮಿಸಿ, ಗ್ರಾ.ಪಂ. ನವರ ಸಹಕಾರ ಪಡೆದು, ವೃದ್ಧ ಮಹಿಳೆಯನ್ನು ಆಂಬ್ಯುಲೆನ್ಸ್ ಮೂಲಕ ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿ, ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಗ್ರಾ.ಪಂ. ಅಧ್ಯಕ್ಷ ನಾಗರಾಜ್, ಪಿಡಿಓ ತಿಪ್ಪೇಸ್ವಾಮಿ, ಆರೋಗ್ಯ ಇಲಾಖೆಯ ಅಕ್ಷತಾ, ಬಿಲ್ ಕಲೆಕ್ಟರ್ ಉಮೇಶ್, ಗ್ರಾಮ ಲೆಕ್ಕಾಧಿಕಾರಿ ದೇವರಾಜ್, ಗ್ರಾಮದ ತಿಪ್ಪೇಶಪ್ಪ, ನಾಗರಾಜ್, ಬಸವರಾಜ್ ಮತ್ತಿತರರು ಈ ವೇಳೆ ಹಾಜರಿದ್ದು, ಮಹಿಳೆಗೆ ಉಪಚಾರ ಮಾಡಿ ಆಸ್ಪತ್ರೆಗೆ ಕಳುಹಿಸಲು ಸಹಕರಿಸಿದರು.

ಚಿಕಿತ್ಸೆಯಿಂದ ಚೇತರಿಸಿಕೊಂಡ ನಂತರ ಈ ಮಹಿಳೆಯನ್ನು ವೃದ್ಧಾಶ್ರಮಕ್ಕೆ ಕಳುಹಿಸುವುದು ಸೂಕ್ತ ಎಂಬ ಮಾತು ಕೇಳಿಬಂದವು.

## ಬೆಣ್ಣೆಹಳ್ಳಿ ಬಸವರಾಜ್‌ಗೆ 'ಅತ್ಯುತ್ತಮ ಎಸ್‌ಡಿಎಂಸಿ ಅಧ್ಯಕ್ಷರು' ಪ್ರಶಸ್ತಿ



ಮಲೇಬೆನ್ನೂರು, ಜ. 10- ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯಿಂದ ಐಎಎಸ್ ಅಧಿಕಾರಿ ಅನಿತಾ ಕೌಲ್ ಸ್ಮರಣಾರ್ಥ ಕೊಡಮಾಡುವ ರಾಜ್ಯ ಮಟ್ಟದ 'ಅತ್ಯುತ್ತಮ ಎಸ್‌ಡಿಎಂಸಿ ಅಧ್ಯಕ್ಷರು' ಪ್ರಶಸ್ತಿಗೆ ಭಾಜನರಾಗಿರುವ ಮಲೇಬೆನ್ನೂರು ಪಿ ಡಬ್ಲ್ಯೂ ಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಅವರಿಗೆ ಬೆಂಗಳೂರಿನಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ಶಿಕ್ಷಣ ತಜ್ಞ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಮತ್ತು ಲೇಖಕಿಯರ ಸಂಘದ ರಾಜ್ಯಾಧ್ಯಕ್ಷರಾದ ಹೆಚ್. ಎಲ್. ಪುಷ್ಪಾ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಶಾಲೆಯ ಬಗ್ಗೆ ಹೊಂದಿರುವ ಕಾಳಜಿ, ನಿಸ್ವಾರ್ಥ ಸೇವೆಯಿಂದ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿರುವ ಸಂದರ್ಭದಲ್ಲಿ ಮನೆ ಮನೆಗೆ ಹೋಗಿ ಪೋಷಕರ ಮನವೊಲಿಸಿ ದಾಖಲಾತಿ ಹೆಚ್ಚಿಸುವ ಕೆಲಸ ಮಾಡಿರುವ ಬಸವರಾಜ್ ಅವರು, ಕೊರೊನಾ ಕಾಲ ಘಟ್ಟದಲ್ಲಿ ವಿದ್ಯಾಗಮ ತರಗತಿ ನಡೆಯುವ ಸಮಯದಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಆರಂಭಿಸಿ ಆನ್ ಲೈನ್ ತರಗತಿಗಳನ್ನು ನಡೆಸಿ, ಶಾಲಾ ದಾಖಲಾತಿ ಹೆಚ್ಚಿಸುವ ಕಾರ್ಯ ಮಾಡಿದ್ದಾರೆ.

ಶಾಲೆಯಲ್ಲಿ ಈ ಹಿಂದೆ 162 ಇದ್ದ ಮಕ್ಕಳ ದಾಖಲಾತಿ ಸಂಖ್ಯೆ 325 ಕ್ಕೆ ಹೆಚ್ಚಳವಾಗಲು ಕಾರಣರಾಗಿದ್ದಾರೆ. ಜೊತೆಗೆ ದಾನಿಗಳ ಹಾಗೂ ಪೋಷಕರ ಸಹಾಯ ಪಡೆದು 1 ಲಕ್ಷದ 50 ಸಾವಿರ ರೂ. ವೆಚ್ಚದಲ್ಲಿ ಹೈಟೆಕ್ ಶೌಚಾಲಯ ಕಟ್ಟಿಸಿದ್ದಾರೆ.

ಶಾಲೆಯಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳ ಸಕ್ರಿಯವಾಗಿ ಭಾಗವಹಿಸಿ ಪಿಡಬ್ಲ್ಯೂ ಡಿ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಲು ಶ್ರಮಿಸಿದ್ದಾರೆ. ಅಲ್ಲದೇ, ಈ ಹಿಂದೆ ಶಿಕ್ಷಣ ಸಚಿವರಾಗಿದ್ದ ಸುರೇಶ್ ಕುಮಾರ್ ಅವರನ್ನು ಭೇಟಿಯಾಗಿ ಮನವಿ ನೀಡಿದ್ದರ ಪರಿಣಾಮ ಶಾಲೆಯಲ್ಲಿ 1 ರಿಂದ 7 ನೇ ತರಗತಿ ವರೆಗೂ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ತರಗತಿಗಳೂ ನಡೆಯುತ್ತಿವೆ.

ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ 350 ಊಟದ ತಟ್ಟೆಗಳನ್ನು ಮತ್ತು ಜಿಲ್ಲಾ ಗ್ರಂಥಾಲಯದಿಂದ 250 ಪುಸ್ತಕಗಳನ್ನು ಶಾಲಾ ಗ್ರಂಥಾಲಯಕ್ಕೆ ತಂದಿರುತ್ತಾರೆ. ಶಿಕ್ಷಕರ ಕೊರತೆ ಕಂಡು ಬಂದಾಗ ತಕ್ಷಣ ಬಿಇಓ ಜೊತೆ ಮಾತನಾಡಿ ಶಿಕ್ಷಕರನ್ನು ಕರೆ ತಂದು ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೆ ತೊಂದರೆಯಾಗದಂತೆ ನೋಡಿಕೊಂಡಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ
ರಾಷ್ಟ್ರೀಯ ಯುವ ದಿನ ಹಾಗೂ
ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ
ಯುವನಿಧಿ
ಫಲಾನುಭವಿಗಳಿಗೆ ನೇರ
ನಗದು ವರ್ಗಾವಣೆ ಕಾರ್ಯಕ್ರಮ
12ನೇ ಜನವರಿ 2024
ಶಿವಮೊಗ್ಗ ನಗರ
ಫ್ರೀಡಂ ಪಾರ್ಕ್
ವಿದ್ಯಾವಂತ ನಿರುದ್ಯೋಗಿ ಯುವಕ/ ಯುವತಿಯರಿಗೆ ಹಣಕಾಸಿನ ನೆರವು ನೀಡಿ, ಅವರಲ್ಲಿ ಆತ್ಮಸ್ಥೈರ್ಯ ಬೆಳೆಸಿ ಸ್ವಾವಲಂಬಿಗಳನ್ನಾಗಿಸಲು ಯುವನಿಧಿ ಯೋಜನೆ ಸಹಕಾರಿ
2 ವರ್ಷಗಳು ಅಥವಾ ಉದ್ಯೋಗ ದೊರಕುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ
ಪ್ರತಿ ತಿಂಗಳು ಪದವೀಧರರಿಗೆ ರೂ.3000, ಡಿಪ್ಲೋಮಾದಾರರಿಗೆ ರೂ.1500 ನಿರುದ್ಯೋಗ ಭತ್ಯೆ ನೀಡಿಕೆ
ಯುವನಿಧಿ ಯೋಜನೆ ಬಗ್ಗೆ ಮಾಹಿತಿ ನೀಡುತ್ತಿರುವ
ಮಾನ್ಯ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್
2023ರಲ್ಲಿ ಪದವಿ/ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಕನಿಷ್ಠ 6 ತಿಂಗಳವರೆಗೆ ಸರ್ಕಾರಿ/ ಖಾಸಗಿ ಉದ್ಯೋಗ ಹೊಂದಿಲ್ಲದ ಕರ್ನಾಟಕದಲ್ಲಿ ವಾಸವಿರುವವರು
ಸ್ವಯಂ ಉದ್ಯೋಗ ಹೊಂದಿಲ್ಲದವರು ಮತ್ತು ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು
ನೋಂದಣಿಗೆ ಅಗತ್ಯವಿರುವ ದಾಖಲಾತಿಗಳು: ಎಸ್.ಎಸ್.ಎಲ್.ಸಿ., ಪಿಯುಸಿ, ಪದವಿ/ಡಿಪ್ಲೋಮಾ ಪ್ರಮಾಣಪತ್ರ
ನೋಂದಾಯಿಸಲು ಭೇಟಿ ನೀಡಿ https://sevasindhugs.karnataka.gov.in
ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು
ಸಹಾಯವಾಣಿ : 1800 599 9918
ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿತ ಅಭ್ಯರ್ಥಿಗಳು ಮಾಸಿಕವಾಗಿ ನಿರುದ್ಯೋಗಿ ಎಂದು ಕಡ್ಡಾಯವಾಗಿ ದೃಢೀಕರಣ ಮಾಡಬೇಕು ಮತ್ತು ತಪ್ಪು ಮಾಹಿತಿ ನೀಡಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10kg
5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500
"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು
ಕರ್ನಾಟಕ ವಾರ್ತೆ

## ಸಂಕ್ಷಿಪ್ತ ಸುದ್ದಿ

**ಮುಷರಫ್‌ಗೆ ಮರಣ ದಂಡನೆ ವಿಧಿಸಿದ್ದು ಸರಿ ಎಂದ ಪಾಕ್ ಸುಪ್ರೀಂ ಕೋರ್ಟ್**

ಇಸ್ಲಾಮಾಬಾದ್ : ದೇಶದ್ರೋಹ ಪ್ರಕರಣದಲ್ಲಿ ಪಾಕಿಸ್ತಾನದ ದಿವಂಗತ ಸೈನಿಕ ಆಡಳಿತಗಾರ ಪರ್ವೇಜ್ ಮುಷರಫ್‌ಗೆ ವಿಧಿಸಲಾಗಿದ್ದ ಮರಣ ದಂಡನೆಯನ್ನು ಅಲ್ಲಿನ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ವಿಶೇಷ ನ್ಯಾಯಾಲಯವು ಮುಷರಫ್‌ಗೆ ಮರಣ ದಂಡನೆ ವಿಧಿಸಿತ್ತು. ಈ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

**370ನೇ ವಿಧಿ ಕುರಿತ ತೀರ್ಪು ಮರು ಪರಿಶೀಲನೆಗೆ ಅರ್ಜಿ**

ನವದೆಹಲಿ : ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ರದ್ದುಗೊಳಿಸುವ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದ ಸುಪ್ರೀಂ ಕೋರ್ಟ್ ತೀರ್ಪಿನ ಮರು ಪರಿಶೀಲನೆಗೆ ಹಲವು ಅರ್ಜಿಗಳು ದಾಖಲಾಗಿವೆ. ಕಳೆದ ಡಿಸೆಂಬರ್ 11ರಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರದ ನಿರ್ಧಾರದ ಪರ ತೀರ್ಪು ನೀಡಿತ್ತು.

**ಕಾಂಗ್ರೆಸ್ ವಿಪಕ್ಷದಲ್ಲಿರಲೂ ಅನರ್ಹ : ನಡ್ಡಾ**

ಗುವಾಹತಿ : ಮಾಲ್ಡೀವ್ಸ್ ವಿವಾದದ ಬಗ್ಗೆ ಕಾಂಗ್ರೆಸ್ ಪಕ್ಷ ಇತ್ತೀಚೆಗೆ ನೀಡಿದ ಹೇಳಿಕೆಗಳನ್ನು ನೋಡಿದರೆ, ಆ ಪಕ್ಷ ವಿರೋಧ ಪಕ್ಷದಲ್ಲಿರಲೂ ಅನರ್ಹ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಟೀಕಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಎಲ್ಲವನ್ನೂ ವೈಯಕ್ತಿಕವಾಗಿ ಪರಿಗಣಿಸುತ್ತಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಮಾಲ್ಡೀವ್ಸ್‌ನ ಮೂವರು ಸಚಿವರು ಮೋದಿ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ ನಂತರ ಅವರನ್ನು ಅಮಾನತ್ತುಗೊಳಿಸಲಾಗಿತ್ತು.

**ಬಾಂಗ್ಲಾದೇಶೀಯರು ಅತಿಕ್ರಮಿಸಿದ್ದ 8 ಸಾವಿರ ಹೆಕ್ಟೇರ್ ಪ್ರದೇಶ ತೆರವು**

ಗುವಾಹತಿ : ಶಂಕಿತ ಬಾಂಗ್ಲಾದೇಶದ ವ್ಯಕ್ತಿಗಳು ಅತಿಕ್ರಮಿಸಿಕೊಂಡಿದ್ದ 8 ಸಾವಿರ ಹೆಕ್ಟೇರ್ ಜಾಗವನ್ನು ತೆರವುಗೊಳಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ.

**ಮಾಲ್ಡೀವ್ಸ್ ಸಚಿವರ ಹೇಳಿಕೆಗಳಿಗೆ ಕೋವಿಂದ್ ಆಕ್ಷೇಪ**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಮಾಲ್ಡೀವ್ಸ್‌ನ ಮೂವರು ಸಚಿವರು ನೀಡಿರುವ ಹೇಳಿಕೆಯನ್ನು ಮಾಜಿ ರಾಷ್ಟ್ರಪತಿ ರಾಮ ನಾಥ ಕೋವಿಂದ್ ಟೀಕಿಸಿದ್ದಾರೆ. ಈ ಲೋಪ ಇಲ್ಲಿಗೇ ಸೀಮಿತವಾಗಿ, ಮುಂದಿನ ದಿನಗಳಲ್ಲಿ ವಿವೇಚನೆ ಕಂಡು ಬರಲಿ ಎಂದೂ ಅವರು ಆಶಿಸಿದ್ದಾರೆ.

**ರಾವಣನಂತೆ ಕಾಂಗ್ರೆಸ್ ಬುದ್ಧಿ ಕಳೆದುಕೊಂಡಿದೆ : ಬಿಜೆಪಿ**

ನವದೆಹಲಿ : ರಾಮ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಹಾಗೂ ಅಧೀರ್ ರಂಜನ್ ಚೌಧರಿ ನಿರ್ಧರಿಸಿರುವುದನ್ನು ಬಿಜೆಪಿ ಟೀಕಿಸಿದೆ. ತ್ರೇತಾಯುಗದಲ್ಲಿ ರಾವಣ ಬುದ್ಧಿ ಕಳೆದುಕೊಂಡ ರೀತಿಯಲ್ಲೇ, ಕಾಂಗ್ರೆಸ್ ನಾಯಕರು ವರ್ತಿಸುತ್ತಿದ್ದಾರೆ ಎಂದು ಪಕ್ಷ ಟೀಕಿಸಿದೆ.

**ಸೀಟು ಹಂಚಿಕೆಗಾಗಿ ಖರ್ಗೆ ಮಾತುಕತೆ**

ನವದೆಹಲಿ : ಲೋಕಸಭಾ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಐ.ಎನ್.ಡಿ.ಐ.ಎ. ನಾಯಕರ ಜೊತೆ ಚರ್ಚೆ ನಡೆಸುತ್ತಿದ್ದಾರೆ. ಪ್ರತಿಪಕ್ಷಗಳ ನಡುವೆ ಹೆಚ್ಚಿನ ಸಮನ್ವಯತೆಗಾಗಿ ಕ್ರಮ ತಗೆದುಕೊಳ್ಳುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ತಿಳಿಸಿದೆ.

**ಅಸ್ಥಿರತೆಯ ನಡುವೆ ಭಾರತ ಹೊಸ ಆಶಾಕಿರಣ : ಮೋದಿ**

ಗಾಂಧಿನಗರ : ಜಾಗತಿಕವಾಗಿ ಕಂಡು ಬರುತ್ತಿರುವ ಅಸ್ಥಿರತೆಯ ನಡುವೆ ಭಾರತ ಹೊಸ ಆಶಾಕಿರಣವಾಗಿದೆ. ಭಾರತವನ್ನು ಸ್ಥಿರತೆಯ ಆಧಾರ ಸ್ತಂಭ, ನಂಬಿಕಾರ್ಹ ಸ್ನೇಹಿತ ಹಾಗೂ ಜಾಗತಿಕ ಬೆಳವಣಿಗೆಯ ಚಾಲನಾ ಶಕ್ತಿಯಾಗಿ ವಿಶ್ವ ಕಾಣುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

# ರಾಹುಲ್ ಗಾಂಧಿ ಯಾತ್ರೆಗೆ ಷರತ್ತಿನ ಅನುಮತಿ

**(1ನೇ ಪುಟದಿಂದ)** ಪಾಲ್ಗೊಳ್ಳುವ ಜನರ ಹೆಸರುಗಳನ್ನು ಮೊದಲೇ ತಿಳಿಸಬೇಕು ಎಂದು ಇಂಫಾಲ್ ಪೂರ್ವ ಜಿಲ್ಲಾಧಿಕಾರಿಗಳ ಕಚೇರಿ ತಿಳಿಸಿದೆ.

ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಈಗ 144 ಸೆಕ್ಷನ್ ವಿಧಿಸಲಾಗಿದೆ. ಶಾಂತಿ ಕಾಯ್ದುಕೊಳ್ಳುವ ಸಲುವಾಗಿ ಹೆಚ್ಚಿನ ಜನ ಸೇರಲು ಅವಕಾಶವಿಲ್ಲ ಎಂದು ತಿಳಿಸಲಾಗಿದೆ.

ರಾಜ್ಯ ಸರ್ಕಾರದ ನಿರ್ಬಂಧದ ಬಗ್ಗೆ ಕಾಂಗ್ರೆಸ್ ಉನ್ನತ ನಾಯಕರು ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ.

# ಗ್ಯಾರಂಟಿ ಅನುಷ್ಠಾನ ಸಮಿತಿ ರಚನೆ

**(1ನೇ ಪುಟದಿಂದ)** ಸಭೆಯಲ್ಲಿ ಪಕ್ಷದ ವಿವಿಧ ಹಂತಗಳ ಮುಖಂಡರನ್ನು ಉದ್ದೇಶಿಸಿ ಮಾತನಾಡಿ, ಕಾರ್ಯಕರ್ತರಿಗೆ ಆಡಳಿತದಲ್ಲೂ ಅಧಿಕಾರ ನೀಡುವ ಘೋಷಣೆ ಮಾಡಿದರು. ಚುನಾವಣೆಯನ್ನು ಗಂಭಿರವಾಗಿ ತೆಗೆದುಕೊಳ್ಳಿ, 28 ಕ್ಷೇತ್ರಗಳ ಪೈಕಿ 26ರಲ್ಲಿ ಗೆಲ್ಲಲೇಬೇಕು ಎಂದು ತಾಕೀತು ಮಾಡಿದರು.

ಗ್ಯಾರಂಟಿ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ರಾಜ್ಯ ಮಟ್ಟದಲ್ಲಿ ಅಧ್ಯಕ್ಷರು, ಐದು ಜನ ಉಪಾಧ್ಯಕ್ಷರು ಇರಲಿದ್ದಾರೆ. ಅಧ್ಯಕ್ಷರಾದವರಿಗೆ ಸಂಪುಟ ದರ್ಜೆ ಸ್ಥಾನಮಾನ ಇರಲಿದೆ. ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನ ನೀಡಲಾಗುವುದು. ಸುಮಾರು 31 ಜನ ಸದಸ್ಯರು ಇರಲಿದ್ದು, ಇವರೆಲ್ಲರೂ ಕಾರ್ಯಕರ್ತರೇ ಆಗಿರುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಒಬ್ಬ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ಸದಸ್ಯರು ಇರಲಿದ್ದಾರೆ. ಅವರಿಗೆ ಕಚೇರಿ ವ್ಯವಸ್ಥೆ ಹಾಗೂ ಗೌರವ ಧನ ನೀಡುವ ವ್ಯವಸ್ಥೆ ಆಗಲಿದೆ ಹಾಗೂ 50 ಸಾವಿರ ರೂ.ಗಳನ್ನು ಪ್ರತಿ ತಿಂಗಳು ನೀಡಲಾಗುವುದು. ಜಿಲ್ಲಾ ಮಟ್ಟದಲ್ಲಿ 21 ಸದಸ್ಯರು ಇರಲಿದ್ದಾರೆ.

224 ಕ್ಷೇತ್ರಗಳಲ್ಲಿ ಅಧ್ಯಕ್ಷರು ಹಾಗೂ 11 ಸದಸ್ಯರು ಇರಲಿದ್ದಾರೆ. ಇವರಿಗೆ ಗೌರವ ಧನ ಹಾಗೂ ಸಿಟ್ಟಿಂಗ್ ಫೀಸ್ ಸಹ ಒದಗಿಸಲಾಗುವುದು. ಈ ಮೊತ್ತವನ್ನು ರಾಜ್ಯ ಖಜಾನೆಯಿಂದ ಭರಿಸಲಾಗುವುದು ಎಂದರು.

ಸರ್ಕಾರಕ್ಕೆ ಇದು ದೊಡ್ಡ ಹೊರೆಯೇನಲ್ಲ, ಪರಿಣಾಮಕಾರಿಯಾಗಿ ಗ್ಯಾರಂಟಿಗಳ ಅನುಷ್ಠಾನವಾಗಬೇಕು ಎಂಬ ಕಾರಣಕ್ಕೆ 16 ಕೋಟಿ ರೂ.ಗಳನ್ನು ಭರಿಸುತ್ತೇವೆ. ಅಪಪ್ರಚಾರಕ್ಕೆ ಉತ್ತರ ಕೊಡಲು ಈ ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದರು.

ಶಾಸಕರು ಹಾಗೂ ಸಂಸದರಲ್ಲದವರಿಗೆ ಸಮಿತಿ ಸದಸ್ಯತ್ವ ದೊರೆಯಲಿದೆ. ವಿವಿಧ ಇಲಾಖೆಗಳ ಸಮಿತಿಗಳನ್ನು ಕೂಡಲೇ ರಚಿಸಲು, ಆಯಾ ಇಲಾಖೆಗಳ ಸಚಿವರ ವಿವೇಚನೆಗೆ ಬಿಡ ಲಾಗಿದೆ. ಹೆಸರುಗಳನ್ನು ಪಡೆಯುವಾಗ ಶಾಸಕರು, ಸಂಸದರ ಸಲಹೆ ಪಡೆಯುವಂತೆ ಸೂಚಿಸಿದರು.

ಕೆಲವು ಶಾಸಕರಿಗೆ, ವಿಧಾನಸಭೆ ಟಿಕೆಟ್ ದೊರೆಯದವರಿಗೆ ಅವಕಾಶ ಕಲ್ಪಿಸಲಾಗುವುದು. ಸದಸ್ಯತ್ವ ಅವಧಿ ಎರಡು ವರ್ಷ ಇರಲಿದೆ. ಕಾರ್ಯಕರ್ತರ ಶ್ರಮದಿಂದ ಪಕ್ಷ ಗಟ್ಟಿಯಾಗಿದೆ ಎಂದರು.

ಚುನಾವಣೆಯನ್ನು ನಾವು ಗೆಲ್ಲಲೇಬೇಕು. ಇಷ್ಟೆಲ್ಲಾ ಮಾಡಿಯೂ ನಾವು ಗೆಲ್ಲದೇ ಹೋದರೆ ಅದು ನಮಗೆ ಹಿನ್ನಡೆಯಾಗಲಿದೆ. ನಾವು ಗೆಲ್ಲಲೇಬೇಕು. 28 ಕ್ಕೆ 28 ಸೀಟನ್ನು ಗೆಲ್ಲಬೇಕು. ಕನಿಷ್ಠ 26 ಸೀಟನ್ನಾದರೂ ಗೆಲ್ಲಬೇಕು. ಜನರ ನಾಡಿ ಮಿಡಿತ ನಮ್ಮ ಪರವಾಗಿರುವುದರಿಂದ ಅಪ ಪ್ರಚಾರದಿಂದ ನಾವು ಯಾರೂ ಹತಾಶರಾಗಬಾರದು, ಸಕಾರಾತ್ಮಕವಾಗಿರಬೇಕು ಎಂದು ಸಿಎಂ ಕಿವಿಮಾತು ಹೇಳಿದರು.

# ಹೆಚ್‌ಐವಿ, ಸಿಫಿಲಿಸ್ ಮತ್ತು ಹೆಪಿಟೈಟಿಸ್ ಗರ್ಭಿಣಿ ಸ್ತ್ರೀಯರಿಗೆ ಜಾಗೃತಿ ಆಂದೋಲನ




ಜಗಳೂರು, ಜ. 10 - ಗರ್ಭಿಣಿ ಮಹಿಳೆಯರು ಪೌಷ್ಟಿಕ ಆಹಾರ, ಸೊಪ್ಪು, ತರಕಾರಿಗಳನ್ನು ಹೆಚ್ಚಾಗಿ ಸೇವನೆ ಮಾಡುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯ ಉತ್ತಮವಾಗಿರುತ್ತದೆ ಎಂದು ಸರ್ಕಾರಿ ಆಸ್ಪತ್ರೆಯ ಪ್ರಸೂತಿ ತಜ್ಞ ಡಾ. ಸಂಜಯ್ ಗರ್ಭಿಣಿ ಮಹಿಳೆಯರಿಗೆ ಸಲಹೆ ನೀಡಿದರು

ಪಟ್ಟಣದ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ, ಐಸಿಟಿಸಿ ಕೇಂದ್ರ ಜಗಳೂರು ಇವರ ಸಂಯುಕ್ತಾಶ್ರಯದಲ್ಲಿ ತಾಯಿಯಿಂದ ಮಗುವಿಗೆ ಹೆಚ್.ಐ.ವಿ. ಸಿಫಿಲಿಸ್ ಮತ್ತು ಹೆಪಿಟೈಟಿಸ್ ಹರಡುವಿಕೆಯ ನಿರ್ಮೂಲನೆಗಾಗಿ ಆಂದೋಲನ ಮತ್ತು ಗರ್ಭಿಣಿ ಸ್ತ್ರೀಯರಿಗೆ ಸೀಮಂತ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮಹಿಳೆಯರಲ್ಲಿ ತಾಯ್ತನ ಎಂಬುವುದು ದೇವರ ಕೊಟ್ಟ ವರವಾಗಿದೆ. ಗರ್ಭಿಣಿಯಾದ ಮಹಿಳೆ ಭಯ ಪಡದೇ ಸಕಾಲಕ್ಕೆ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವುದು ಮತ್ತು ಪೌಷ್ಟಿಕ ಆಹಾರ ಸೇವನೆ ಮಾಡುವುದರಿಂದ ತಾಯಿ-ಮಗುವಿನ ಆರೋಗ್ಯ ಉತ್ತಮವಾಗಿರಲಿದೆ, ಹೆಚ್ ಐವಿ ಪರಿಕ್ಷೆಯನ್ನು ತಪ್ಪದೇ ಮಾಡಿಸಬೇಕು. ಒಂದು ವೇಳೆ ಇದ್ದರೆ ಮಗುವಿಗೆ ಹರಡದಂತೆ ಚಿಕಿತ್ಸೆ ಕೊಡಲಾಗುವುದು ಸರ್ಕಾರದ ವತಿಯಿಂದ ಗರ್ಭಿಣಿ ಮಹಿಳೆಯರಿಗೆ ಸೀಮಂತ ಕಾರ್ಯ ಮಾಡುತ್ತಿರುವುದು ಸಂತೋಷದ ವಿಚಾರವಾಗಿದೆ ಎಂದರು.

ಆಯುರ್ವೇದ ವೈದ್ಯರಾದ ಶ್ವೇತಾ ಮಾತನಾಡಿ, ಗರ್ಭ ಸಂಸ್ಕಾರ ಕುರಿತು ಮಾತನಾಡಿ ಗರ್ಭ ಧರಿಸಿದ ಸಂದರ್ಭದಲ್ಲಿ ಒತ್ತಡಕ್ಕೆ ಒಳಗಾಗದೇ ಒಂಬತ್ತು ತಿಂಗಳ ಕಾಲ ಸಂತೋಷ ವಾಗಿರಬೇಕು ಹಾಗಾಗಿ ಸಂಗೀತ ಆಲಿಸುವುದು, ಕಥೆ-ಕವನಗಳನ್ನು ಓದುವುದು ಮತ್ತು ಕೇಳುವುದನ್ನು ಮಾಡಿದರೆ ಆರೋಗ್ಯವಂತ ಮಕ್ಕಳನ್ನು ಪಡೆಯಬಹುದು ಎಂದರು.

ಆಶಾ ಮೇಲ್ವಿಚಾರಕರಾದ ರೇಷ್ಮಾ ಮಾತನಾಡಿ, ಗರ್ಭಿಣಿಯರಿಗೆ ಸರ್ಕಾರದ ವತಿಯಿಂದ ನೀಡುವಂಥ ತಾಯಿ ಕಾರ್ಡ್ 9 ನ್ನು ಸಮಗ್ರವಾಗಿ ಓದಿಕೊಳ್ಳಬೇಕು. ಇದರಲ್ಲಿ ಹೆರಿಗೆ, ಮಕ್ಕಳ ಬೆಳವಣಿಗೆ ಸೇರಿದಂತೆ ಲಸಿಕಾ ಕಾರ್ಯಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಿರುವ ಕಣಜವಾಗಿದೆ. ಗರ್ಭಿಣಿಯರು ಹೆಚ್ಚಾಗಿ ಪೋಷಕಾಂಶ ಉಳ್ಳ ಆಹಾರಗಳನ್ನು ಸೇವನೆ ಮಾಡಬೇಕು ಇದರಿಂದ ಅನುಕೂಲವಾಗಲಿದೆ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ವಿರುಪಾಕ್ಷಪ್ಪ, ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಷಣ್ಮುಖಪ್ಪ, ಆಪ್ತ ಸಮಾಲೋಚಕ ಉಮೇಶ್ ಮಾತನಾಡಿದರು.

38 ಗರ್ಭಿಣಿಯರಿಗೆ ಸೀಮಂತ ಕಾರ್ಯ ಮಾಡಿ ಉಡಿ-ತುಂಬುವ ಕಾರ್ಯವನ್ನು ನೆರವೇರಿಸಿದ ನಂತರ ಸಿಹಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಶುಶ್ರೂಷಕಿಯರಾದ ಏಕಾಂತಮ್ಮ, ಮೀನಾಕ್ಷಮ್ಮ, ಆಶಾ, ಲೋಕೇಶ್ವರಿ, ಭಾರತಿ, ರೂಪ, ಬಸಮ್ಮ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಭದ್ರಾ ಸಲಹಾ ಸಮಿತಿ ನಿರ್ಣಯ ರದ್ದುಗೊಳಿಸಿ

**(1ನೇ ಪುಟದಿಂದ)** ಕೊಳೇನಹಳ್ಳಿ, ಕೆ.ಬಿ. ಕೊಟ್ರೇಶ್, ಬೆಳವನೂರು ನಾಗೇಶ್ವರರಾವ್, ಧನಂಜಯ ಕಡ್ಲೆಬಾಳ್, ಶಾಮನೂರು ಎಲ್. ಎನ್. ಕಲ್ಲೇಶ್, ಶ್ರೀನಿವಾಸ ದಾಸಕರಿಯಪ್ಪ, ಕಾಶೀಪುರದ ಶಂಭಣ್ಣ, ಕೆ.ಜಿ. ಸ್ವಾಮಿಲಿಂಗಪ್ಪ, ಬಲ್ಲೂರು ಬಸವರಾಜ್, ಶಾಗಲೆ ದೇವೇಂದ್ರಪ್ಪ , ಲೋಕಿಕೆರೆ ನಾಗರಾಜ್, ಬೇತೂರು ಸಂಗಪ್ಪ, ಆರನೇ ಕಲ್ಲು ವಿಜಯಕುಮಾರ್, ಹೆಚ್.ಎನ್. ಗುರುನಾಥ್, ಕುಂದುವಾಡದ ಗಣೇಶಪ್ಪ, ಜಿಮ್ಮಿ ಹನುಮಂತಪ್ಪ, ಮಹೇಶಪ್ಪ, ಆವರಗೊಳ್ಳ ಷಣ್ಮುಖಯ್ಯ, ಕೃಷ್ಣಮೂರ್ತಿ ಪವಾರ್, ಕಕ್ಕರಗೊಳ್ಳ ಕಲ್ಲಿಂಗಪ್ಪ, ಪ್ರದೀಪ್, ಶ್ಯಾಗಲೆ ಜಗದೀಶಗೌಡ್ರು, ಗೋಪನಾಳ್ ಮಲ್ಲಿಕಾರ್ಜುನಯ್ಯ, ಕಲ್ಪನಹಳ್ಳಿ ಸತೀಶ್, ಬಾತಿ ವೀರೇಶ್ ದೊಗ್ಗಳ್ಳಿ, ಅಣಬೇರು ಶಿವಪ್ರಕಾಶ್, ಮಳಲ್ಕೆರೆ ಕಲ್ಲಪ್ಪ ಗುಡ್ಡದ, ಸದಾನಂದ, ನಾಗರಸನಹಳ್ಳಿ ರುದ್ರೇಶ, ಕೈದಾಳೆ ಗುರುಪ್ರಸಾದ್, ಗೋಣಿವಾಡ ನಾಗರಾಜಪ್ಪ, ಹೊಸಹಳ್ಳಿ ಶಿವಮೂರ್ತಿ ಇತರರು ಪ್ರತಿಭಟನೆಯಲ್ಲಿದ್ದರು.

## ಜಿಲ್ಲಾ ರೈತರ ಬೇಡಿಕೆಗಳು

ಭದ್ರಾ ಅಧೀಕ್ಷಕ ಇಂಜಿನಿಯರ್ ಸುಜಾತ ಅವರು ಘೋಷಿಸಿರುವ ಹೊಸ ವೇಳಾಪಟ್ಟಿಯನ್ನು ಮತ್ತು ಜ.6ರಂದು ನಡೆದ ಭದ್ರಾ ನೀರಾವರಿ ಸಲಹಾ ಸಮಿತಿ ನಿರ್ಣಯವನ್ನು ತಕ್ಷಣ ರದ್ದುಗೊಳಿಸಬೇಕು.

ಪ್ರಸ್ತುತ ಡ್ಯಾಂನಲ್ಲಿ 151 ಅಡಿ 4 ಇಂಚು ನೀರು ಇದ್ದು, ಡೆಡ್ ಸ್ಟೋರೇಜ್ 13.38 ಟಿಎಂಸಿ ತೆಗೆದು, 21.54 ಟಿಎಂಸಿ ನೀರು ಬಳಸಬಹುದಾಗಿದೆ. ಇದನ್ನು ಪ್ರತಿ ದಿನ 0.29 ಟಿಎಂಸಿಯಂತೆ 74 ದಿನ ಎಡ ಮತ್ತು ಬಲದಂಡೆ ನಾಲೆಗಳಲ್ಲಿ ಹರಿಸಬಹುದು. ಆದ್ದರಿಂದ ಫೆಬ್ರವರಿ 1 ರಿಂದ 20 ದಿನ ನೀರು ಹರಿಸಿ, 10 ದಿನ ನಿಲ್ಲಿಸಬೇಕು. ಮಾರ್ಚ್ ತಿಂಗಳಲ್ಲಿ 20 ದಿನ ಮತ್ತು ಎಪ್ರಿಲ್ ತಿಂಗಳಲ್ಲಿ 20 ದಿನ ನೀರು ಹರಿಸುವ ವೇಳಾಪಟ್ಟಿ ಪ್ರಕಟಿಸಬೇಕು.

ಜಿಲ್ಲೆಯಲ್ಲಿ ಶೇ.70 ರಷ್ಟು ಭದ್ರಾ ಅಚ್ಚುಕಟ್ಟು ಪ್ರದೇಶ ಇರುವುದರಿಂದ ಭದ್ರಾ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರು ದಾವಣಗೆರೆ ಜಿಲ್ಲೆಯವರಾಗಬೇಕು ಮತ್ತು ಐಸಿಸಿ ಸಭೆಯನ್ನು ಕಡ್ಡಾಯವಾಗಿ ದಾವಣಗೆರೆಯಲ್ಲಿ ನಡೆಸಬೇಕು. ನಾಲೆಯಲ್ಲಿ ನೀರು ಹರಿಸಿದಾಗ ಹಿರೇಕೋಗಲೂರು ಬಳಿ ಮತ್ತು ಬೆಳ್ಳಿಗನೂಡು ಬಳಿ ಕಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ ಸೂಪರ್ ಪ್ಯಾಸೇಜ್ ಒಡೆದು ಅಧಿಕ ಪ್ರಮಾಣದ ನೀರು ರಸ್ತೆಯಲ್ಲಿ ಹರಿದು ಹೋಗಿ ಪೋಲಾಗುತ್ತಿದೆ. ಅದೇ ರೀತಿ ಕಾಲುವೆಗಳಿಗೆ ಅಡ್ಡಲಾಗಿ ರಸ್ತೆಯಲ್ಲಿ ನಿರ್ಮಿಸಿರುವ ಡಕ್ ಗಳು (ಸೇತುವೆಗಳು) ಶಿಥಿಲಗೊಂಡು ನೀರು ಸೋರಿಕೆಯಾಗಿ ಹರಿದು ಪೋಲಾಗುತ್ತಿದೆ. ತಕ್ಷಣ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಕ್ರಮವಹಿಸಿ, ದುರಸ್ತಿ ಕಾರ್ಯ ಕೈಗೊಳ್ಳಬೇಕು. ನೀರು ಹರಿದು ಪೋಲಾಗುವುದನ್ನು ನಿಯಂತ್ರಿಸಬೇಕು.

ನೀರಾವರಿ ನಿಗಮದ ಅಧಿಕಾರಿಗಳು ಸೌಡಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಸಮರ್ಪಕವಾಗಿ ನೀರು ನಿರ್ವಹಣೆ ಮಾಡಿ, ಕೊನೆ ಭಾಗಕ್ಕೆ ನೀರು ತಲುಪಿಸಬೇಕು ಎಂಬುದು ಜಿಲ್ಲೆಯ ರೈತರ ಬೇಡಿಕೆಗಳಾಗಿದ್ದು, ಈ ಬೇಡಿಕೆಗಳನ್ನು ಈಡೇರಿಸುವಂತೆ ಇಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಉಪ ವಿಭಾಗಾಧಿಕಾರಿಗಳ ಅನುಪಸ್ಥಿತಿಯಲ್ಲಿ ತಹಶೀಲ್ದಾರ್ ಅವರು ಇಂದು ರೈತ ಮುಖಂಡರ ಮನವಿ ಸ್ವೀಕರಿಸಿದರು.

# ಹತ್ತು ಸಚಿವರ ಕಣಕ್ಕಿಳಿಸಿ

**(1ನೇ ಪುಟದಿಂದ)** ಬಿಡಾರ ಹೂಡಿರುವ ಸುರ್ಜೇವಾಲಾ, ವರದಿಯಲ್ಲಿ ಹೆಸರಿಸಿರುವ ಸಚಿವರುಗಳನ್ನು ತಾವು ತಂಗಿದ್ದ ಹೋಟೆಲ್‌ಗೆ ಕರೆಸಿಕೊಂಡು ಚರ್ಚೆ ಮಾಡಿ, ನೀವು ಪಕ್ಷದ ತೀರ್ಮಾನಕ್ಕೆ ಯಾವುದೇ ತ್ಯಾಗಕ್ಕೂ ಸಿದ್ಧವಾಗಿರುವಂತೆ ತಿಳಿಸಿದ್ದಾರೆ.

ಚುನಾವಣಾ ಕಣಕ್ಕಿಳಿಯಬೇಕೆಂಬ ಸಂಭವನೀಯ ಸಚಿವರಿಗೆ ನಾಳೆ ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ವರಿಷ್ಠರು ಯಾವ ತೀರ್ಮಾನ ಕೈಗೊಳ್ಳುತ್ತಾರೋ ಅದಕ್ಕೆ ಬದ್ಧರಾಗಿ ಎಂದು ಹೇಳಿ ಕಳುಹಿಸಿದ್ದಾರೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಹೊರತುಪಡಿಸಿ ಉಳಿದ ಸಂಭವನೀಯ ಸಚಿವರಿಗೆ ಮಂತ್ರಿ ಸ್ಥಾನ ಬಿಡಲು ಕಿಂಚಿತ್ತೂ ಮನಸ್ಸಿಲ್ಲ. ಜೊತೆಗೆ ದೆಹಲಿ ರಾಜಕಾರಣವೂ ಬೇಡವಾಗಿದೆ.

ಕನುಗೋಲು ನೀಡಿರುವ ವರದಿಯಂತೆ ನಮ್ಮನ್ನು ಚುನಾವಣಾ ಕಣಕ್ಕಿಳಿಯಲು ವರಿಷ್ಠರು ತಾಕೀತು ಮಾಡಿದರೆ ಅದರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬ ಲೆಕ್ಕಾಚಾರ ಆರಂಭಿಸಿದ್ದಾರೆ. ನಾಳೆ ದಹಲಿ ಸಭೆ ನೋಡಿದ ನಂತರ ತೀರ್ಮಾನ ಕೈಗೊಳ್ಳಲು ಸಂಭವನೀಯರು ನಿರ್ಧರಿಸಿದ್ದಾರೆ.

ಉನ್ನತ ಮೂಲಗಳ ಪ್ರಕಾರ ವರದಿಯಲ್ಲಿ ಕೆ. ಹೆಚ್.ಮುನಿಯಪ್ಪ (ಕೋಲಾರ-ಮೀಸಲು), ಚಲುವರಾಯ ಸ್ವಾಮಿ (ಮಂಡ್ಯ), ಡಾ.ಹೆಚ್.ಸಿ. ಮಹದೇವಪ್ಪ (ಚಾಮರಾಜನಗರ-ಮೀಸಲು), ಕೆ.ಎನ್. ರಾಜಣ್ಣ (ಚಿತ್ರದುರ್ಗ-ಮೀಸಲು), ಈಶ್ವರ ಖಂಡ್ರೆ (ಬೀದರ್), ಸತೀಶ್ ಜಾರಕಿಹೊಳಿ (ಬೆಳಗಾವಿ), ಹೆಚ್.ಕೆ ಪಾಟೀಲ್ (ಹಾವೇರಿ) ಸೇರಿದಂತೆ 10 ಸಚಿವರನ್ನು ಹೆಸರಿಸಲಾಗಿದೆ.

ಅಲ್ಲದೆ, ಕೆಲವು ವರ್ಚಸ್ವಿ ಹಾಗೂ ಹಿರಿಯ ಶಾಸಕರನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದರೆ ಪಕ್ಷಕ್ಕೆ ಲಾಭವಾಗಲಿದೆ ಎಂದು ವರದಿಯಲ್ಲಿ ಕನುಗೋಲು ತಿಳಿಸಿದ್ದಾರೆ.

# ಆಹ್ವಾನ ನಿರಾಕರಿಸಿದ ಸೋನಿಯಾ, ಖರ್ಗೆ

**(1ನೇ ಪುಟದಿಂದ)** ದೇವಾಲಯವನ್ನು ಉದ್ಘಾಟಿಸುತ್ತಿರುವುದೇಕೆ? ಎಂದೂ ಪ್ರಶ್ನಿಸಿದ್ದಾರೆ. ಜನವರಿ 22 ರಂದು ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ಅಧೀರ್ ರಂಜನ್ ಚೌಧರಿ ಅವರಿಗೆ ಕಳೆದ ತಿಂಗಳು ಆಹ್ವಾನ ನೀಡಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ರಮೇಶ್, ರಾಮ ದೇವರನ್ನು ದೇಶದ ಲಕ್ಷಾಂತರ ಜನರು ಆರಾಧಿಸುತ್ತಾರೆ. ಧರ್ಮ ವೈಯಕ್ತಿಕ ವಿಷಯ. ಆದರೆ, ಅಯೋಧ್ಯೆಯ ರಾಮ ಮಂದಿರ ಯೋಜನೆಯನ್ನು ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು ಸುದೀರ್ಘ ಕಾಲದಿಂದ ರಾಜಕೀಯ ಯೋಜನೆ ಮಾಡಿವೆ ಎಂದು ಹೇಳಿದರು. ರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಾಗಿ ಹಿಮಾಚಲ ಪ್ರದೇಶ ಸಚಿವ ಹಾಗೂ ಕಾಂಗ್ರೆಸ್ ನಾಯಕ ವಿಕ್ರಮಾದಿತ್ಯ ಸಿಂಗ್ ಕಳೆದ ಸೋಮವಾರ ತಿಳಿಸಿದ್ದರು.

ಉತ್ತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಹಾಗೂ ಇತರೆ 100ಕ್ಕೂ ಹೆಚ್ಚು ಪಕ್ಷದ ಪದಾಧಿಕಾರಿಗಳು ಜನವರಿ 15ರ ಮಕರ ಸಂಕ್ರಾಂತಿಯಂದು ಅಯೋಧ್ಯೆಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು ರಾಮ ಮಂದಿರ ಹಾಗೂ ಹನುಮಾನ್ ಘಡಿ ದೇವಾಲಯಗಳಿಗೆ ಭೇಟಿ ನೀಡಲಿದ್ದಾರೆ.


**ಮನೆ ಬಾಡಿಗೆಗಿದೆ**
ಸಿದ್ದವೀರಪ್ಪ ಬಡಾವಣೆ 12ನೇ ಕ್ರಾಸ್, 7ನೇ ಮೇನ್ ಕಾರ್ನರ್‌ನಲ್ಲಿ 2 ಬೆಡ್ ರೂಂನ 1ನೇ ಮಹಡಿ ಮನೆ ಬಾಡಿಗೆಗಿದೆ.
ಮೊ. 80952-62026

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಪೂರ್ವ 40x50 (ಕಾವೇರಿ ಅಪಾರ್ಟ್‌ಮೆಂಟ್ ಹತ್ತಿರ) ಶಕ್ತಿನಗರ ಪೂರ್ವ 30x40 (ಅಕ್ಕ-ಪಕ್ಕ) ಸ್ವಾಮಿ ವಿವೇಕಾನಂದ ಬಡಾವಣೆ (LIC ಕಾಲೋನಿ) ದಕ್ಷಿಣ 15x45, ಡಾಲರ್ಸ್ ಕಾಲೋನಿ, ಉತ್ತರ 40x60 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
1)40X60 ಉತ್ತರ 120 ಅಡಿ ರಸ್ತೆಗೆ
2)40X40 ಕಾರ್ನರ್ 60 ಅಡಿ ರಸ್ತೆಗೆ
3) 40X60ದಕ್ಷಿಣ 40 ಅಡಿ ರಸ್ತೆಗೆ
4)40X60 ಪಶ್ಚಿಮ
ಕಿರಣ್ ಭೂಸನೂರ್ (ಏಜೆಂಟ್)
98440 63409, 97315 63409

**Property Doctor / ಪ್ರಾಪರ್ಟಿ ಡಾಕ್ಟರ್**
ಈ ಸೈಟ್ ತೊಗೋಬಹುದಾ? ದಾಖಲೆಗಳು ಏನು ಬೇಕು? ಕಾನೂನು ಪ್ರಕಾರ ಸರಿ ಇದೇನಾ? ಲೋನ್ ಸಿಗುತ್ತಾ? ಈ ರೇಟಿಗೆ ನನ್ನ ಸೈಟ್ ಮಾರಾಟ ಮಾಡಬಹುದಾ? ಈ ಎಲ್ಲ ಮಾಹಿತಿಯನ್ನು ನಿಮಗೆ ಕೇವಲ 100/- ನಲ್ಲಿ ಕೊಡಲಾಗುವುದು
96325 54524

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ**
40x60 East, 40x60 South, 40x60 West, 40x60 North, 30x40 East, 50x80 East. Rate - 2800/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆ ಹತ್ತಿರ ಪೋದಾರ್ ಸ್ಕೂಲ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ ಒಂದು ಅಡಿಗೆ 3,200 ರೂ.ಗಳಲ್ಲೂ ಲಭ್ಯ. 30x35 ಪಶ್ಚಿಮ-ಉತ್ತರ ಕಾರ್ನರ್ 60 ಅಡಿ ರಸ್ತೆಗೆ, 30x50 ಉತ್ತರ-ಪೂರ್ವ ಕಾರ್ನರ್ 60 ಅಡಿ ರಸ್ತೆಗೆ, 30x40 ದಕ್ಷಿಣ, 30x40 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಹೋಲ್‌ಸೇಲ್ ಮೆಡಿಕಲ್ ಫಾರ್ಮಾದಲ್ಲಿ ಆಫೀಸ್ ಕೆಲಸ ಮಾಡಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ 30 ವರ್ಷ ಒಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
98806 59221 / 93410 21860

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185

**ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಪೂರ್ವ 30x50, ಪೂರ್ವ-ದಕ್ಷಿಣ ಕಾರ್ನರ್ 40x65, ಪಶ್ಚಿಮ 30x70 (60 ಅಡಿ ರಸ್ತೆ) ಪೂರ್ವ 50x80, ಶಿವ-ಪಾರ್ವತಿ ಪೂರ್ವ 40x55, 40x60 ಪಶ್ಚಿಮ 30x40 (ಅಕ್ಕ-ಪಕ್ಕ) 30x55
ಐಗೂರು ವಿಜಯಕುಮಾರ
99457 02495

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಮನೆಗಳು, 30x50 North ಮನೆ, 30x40 East ಮನೆ, 20x48 West ಸೈಟು, 40x60 North ಸೈಟು, 30x50 East ಸೈಟು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**HOUSES FOR RENT**
1BHK, 2BHK, 3BHK Duplex, Independent, S.S Layout, Shivakumar swamy Layout, MCC B Block. Siddaveerappa Layout.
77955 06795
Dakshith Iyanahalli

**ಸೈಟು ಮತ್ತು ಮನೆ ಮಾರಾಟಕ್ಕೆ ಇವೆ**
ಬಾಲಾಜಿ ಬಡಾವಣೆಯಲ್ಲಿ 30x50 ಪೂರ್ವ-ಪಶ್ಚಿಮ ಉತ್ತರ ಇವೆ. ವಿನಾಯಕ ಬಡಾವಣೆಯಲ್ಲಿ 40x60 ದಕ್ಷಿಣ, ಡಾಲರ್ಸ್ 44x60 ಪಶ್ಚಿಮ-ದಕ್ಷಿಣ ಕಾರ್ನರ್, 40x60 ಪೂರ್ವ, 25x60 ಪೂರ್ವ, MCC 'A' SS 'B' 30x40 ಉತ್ತರ ಮನೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಗಾಡಿ ಬಾಡಿಗೆಗೆ ದೊರೆಯುತ್ತದೆ**
ನಮ್ಮಲ್ಲಿ ಮನೆ/ಆಫೀಸ್ ಶಿಫ್ಟಿಂಗ್ ಮಾಡಿಕೊಡಲು ಗೂಡ್ಸ್ ಗಾಡಿ ಬೊಲೇರೋ ಮತ್ತು ಕೆಲಸಗಾರರು ದೊರೆಯುತ್ತಾರೆ. ದಾವಣಗೆರೆ ಮತ್ತು ಸುತ್ತ-ಮುತ್ತ ಊರುಗಳಲ್ಲಿ. ಸಂಪರ್ಕಿಸಿ.
93536 27703, 91645 24215

**ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳೆಯರು, ಪುರುಷರು ಸಂಪರ್ಕಿಸಿ
ಮೋಹನ್ ಕಾಫೀ ಬಾರ್
ಎಂಸಿಸಿ 'ಎ' ಬ್ಲಾಕ್, ದಾವಣಗೆರೆ
98446 30046

**ಶಾಲೆಗೆ ಆಯಾ ಬೇಕಾಗಿದ್ದಾರೆ**
ಕೆ.ಬಿ. ಬಡಾವಣೆ, ಜಯದೇವ ಸರ್ಕಲ್ ಹತ್ತಿರವಿರುವ ಶಾಲೆಗೆ ಆಯಾ ಬೇಕಾಗಿದ್ದಾರೆ.
ವೇತನ 4,700 ರಿಂದ 5,000 ರೂಗಳು.
ಕೂಡಲೇ ಸಂಪರ್ಕಿಸಿ.
99801 48289, 87468 95680

**WANTED**
Watchmen For Construction Building Day And Night.
8861 58644


**ಬೇಕಾಗಿದ್ದಾರೆ**
ಪಾರ್ಟ್ ಟೈಮ್ ಅಥವಾ ಫುಲ್ ಟೈಮ್‌ಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ (ಪಿಯುಸಿ ಪಾಸ್ ಅಥವಾ ಫೇಲ್) ಸ್ವಂತ ದ್ವಿಚಕ್ರ ವಾಹನ ಹೊಂದಿರಬೇಕು.
ಶ್ರೀ ರೇಣುಕಾ ನಿಲಯ
#566/c2/03, 60 ಫೀಟ್ ರಸ್ತೆ, 12ನೇ ಮುಖ್ಯ ತಿರುವು, ಆಶಾ ವೈನ್ ಶಾಪ್ ಹತ್ತಿರ, ನಿಟ್ಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.
97429 92024

**ಮನೆ ಬಾಡಿಗೆಗೆ**
ಮೊದಲನೇ ಮಹಡಿ ಸಿಂಗಲ್ ಬೆಡ್ ರೂಮ್, ಮುನ್ಸಿಪಲ್ & ಬೋರ್ ವೆಲ್ ನೀರಿನ ಸೌಕರ್ಯವುಳ್ಳ ಪೂರ್ವ ದಿಕ್ಕಿನ ಮನೆ, DCM ಟೌನ್ ಶಿಪ್. ಸಂಪರ್ಕಿಸಿ :
98443 10168

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಪಶ್ಚಿಮ 30x40 ಅಕ್ಕ-ಪಕ್ಕ 4 ಸೈಟು, ಗ್ಲಾಸ್ ಹೌಸ್ ಹತ್ತಿರ 30x50 ಪಶ್ಚಿಮ, KHB ಕಾಲೋನಿ ಹತ್ತಿರ 30x40 ದಕ್ಷಿಣ, ಶಿವಕುಮಾರ ಬಡಾವಣೆಯಲ್ಲಿ 30x40 ಮನೆ ಇದೆ.
ಏಜೆಂಟರು S ಯಲ್ಲೋಜಿರಾವ್
97418 11694

**SITE FOR SALE**
Vidyanagar Bypass Commercial Site 4500 Sq.ft
80886 73838

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

**SKIN, HAIR & BODY CARE**

* Ayurvedic Massages
* Swedishi Massages
* Pain relief Massages
Full Body Relaxation
NOW AT DAVANGERE
87923 31569

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
1ನೇ ಲಕ್ಕಿ ಡ್ರಾ ವಿನ್ನರ್
826
ಉಮಾ ಮಹೇಶ್ವರಿ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
98445 74805

**ಬಿಲ್ಡಿಂಗ್ ಬಾಡಿಗೆಗೆ ಇದೆ**
ಸ್ಟೇಟ್ ಸ್ಟೇಡಿಯಂ ರೋಡ್ ಹತ್ತಿರ 12:30 45 ಅಳತೆಯ ಗ್ರೌಂಡ್, ಫಸ್ಟ್, ಸೆಕೆಂಡ್ ಫ್ಲೋರ್ ಉಳ್ಳ ಬಿಲ್ಡಿಂಗ್ ಬಾಡಿಗೆಗೆ ಇದೆ. ಸಂಪರ್ಕಿಸಿ.
944 82 72734

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 9 ರಿಂದ ಸಂಜೆ 9ರವರೆಗೆ
ಪರಿಮಳ ಕಾಫೀ ಕಂಪನಿ, ಮಂಡಿಪೇಟೆ, ದಾವಣಗೆರೆ.
94482 72734

**2 BHK RENT / LEASE**
15 lakh lease for 3 years, All higher quality interiers, Inside brokers are not available, Only buyers can cal derectly.
90364 66669

**ಎಕ್ಸ್‌ಚೇಂಜ್ ಆಫರ್**
ಸೋಫಾ, ಕುಷನ್, ಫರ್ನಿಚರ್ ಹಾಗೂ ಸ್ಪಾಂಜ್ ಬೆಡ್‌ಗಳಿಗೆ ಎಕ್ಸ್‌ಚೇಂಜ್ ಇರುತ್ತದೆ.
(ಕಂತಿನ ಸೌಲಭ್ಯ)
79751 07268, 91486 70932

**SMART CITY CABS DAVANAGERE**
Minimum 4km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ದಾನಿಶ್ ಅಕ್ವೇರಿಯಂ ಹೋಂ ಡೆಕೋರ್**
2ನೇ ವರ್ಷದ ವಾರ್ಷಿಕದ ಮಹೋತ್ಸವ ಅಂಗವಾಗಿ
ದಿನಾಂಕ : 11.01.2024 ರಿಂದ 13.01.2024 ಮೂರು ದಿನಗಳ ಭಾರೀ ರಿಯಾಯಿತಿ ಮಾರಾಟ
#795/20, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ರಸ್ತೆ, ಜಯನಗರ, ಎ ಬ್ಲಾಕ್, ದಾವಣಗೆರೆ.
98453 70694

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
Famous Astrologer
No. 1 ವಶೀಕರಣ ಸ್ಪೇಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
ಜಿ. ವೀರೇಶ್‌ರಾವ್ ಶಾಸ್ತ್ರಿ
ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**ಸೈಟು ಮಾರಾಟಕ್ಕಿದೆ**
ಹರಿಹರದಿಂದ ಹರಪನಹಳ್ಳಿಗೆ ಹೋಗುವ ರಸ್ತೆಯ ಗುತ್ತೂರಿನ Cloud-9 ಶಾಲೆ ಮತ್ತು ಬಸವೇಶ್ವರ ಬಡಾವಣೆಯ ಮಧ್ಯದಲ್ಲಿ ಸರ್ವೆ ನಂ. 125 ಹೊಸ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
8197300410, 81399 88555

**ಮನೆ ಬಾಡಿಗೆಗೆ**
ಚೌಕಿಪೇಟೆಯಲ್ಲಿ ಬೇವಿನ ಮರದ ಹತ್ತಿರ, 2 BHK, 1ನೇ ಮಹಡಿಯಲ್ಲಿ 2 ಮನೆ ಬಾಡಿಗೆಗೆ ಇವೆ.
94484 05913
94488 45062

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬಾಂಧವ್ಯ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ರೋಗಿಗಳಿಗೆ ಆಯಿಲ್ ಮಸಾಜ್ ಮಾಡಿಸುತ್ತೇವೆ.
85508 36642, 76191 70395

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**APARTMENT SALE FOR 4 CRORES**
Brokers are not available. Only direct buyers can call. 2BHK rent receiving 5 house with lift facility 24x7 water, Front house 5 bed rooms available. Top lake view 6 car parking space in ground 50x32 feet.
90364 66669

**2 BHK FLAT FOR SALE**
1250 Sq. ft., 2 Balconies. 2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to +91- 9742521922

**65HP ವಿದ್ಯುತ್‌ಉಳ್ಳ ಇಂಡಸ್ಟ್ರೀ ಮಾರಾಟಕ್ಕಿದೆ**
ಗ್ರೌಂಡ್ ಫ್ಲೋರ್‌ನಲ್ಲಿ ಅಗಲ 65 ಉದ್ದ 75 ಅಡಿ ಇರುವ ಒಟ್ಟು ಅಳತೆ 4875, ಮೊದಲನೇ ಮಹಡಿ 75x75 ಒಟ್ಟು ಅಳತೆ 5625 ಒಟ್ಟು ಅಳತೆ =10500. ಗ್ರೌಂಡ್ ಫ್ಲೋರ್‌ನಲ್ಲಿ ಲಿಫ್ಟ್ ಇದ್ದು 3ನೇ ಫ್ಲೋರ್‌ವರೆಗೂ ಸರಕು ತೆಗೆದುಕೊಂಡು ಹೋಗಬಹುದು, ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
90364 66669

**WANTED**
Sharp Photocopier Machines Service Engineer (ITI or Dimpoma) Two-Wheeler Compulsory
Gaurav Communications
Davanagere. Contact :
94487 28866

**JOIN OUR TEAM**
We are Looking for
Graphic Designers, Digital Marketing, Video Editors, Accountant, Supervisors, Marketing
Basic Salary Starts from 15, 000/-upto 50,000/-
WE ARE HIRING
+ 91 97431 53987, +91 99019 11421

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

## ರಾಮ ಮಂದಿರ : ವಾಲ್ಮೀಕಿ, ಪಂಚಮಸಾಲಿ ಶ್ರೀಗಳಿಗೆ ಆಮಂತ್ರಣ





ಮಲೇಬೆನ್ನೂರು, ಜ.10- ಅಯೋಧ್ಯೆಯಲ್ಲಿ ಇದೇ ದಿನಾಂಕ 22 ರಂದು ನಡೆಯುವ ಶ್ರೀರಾಮ ಮಂದಿರದ ಲೋಕಾರ್ಪಣೆ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಕರ್ನಾಟಕದ ವಿಶ್ವ ಹಿಂದೂ ಪರಿಷತ್‌ನ ಪ್ರಮುಖರು ಮಂಗಳವಾರ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮತ್ತು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರಿಗೆ ಆಹ್ವಾನ ನೀಡಿದರು.

## ದುರ್ಬಲರ ಸೇವೆಯೇ ಭಗವಂತನ ಸೇವೆ

### ಕರುಣಾ ಟ್ರಸ್ಟ್ ಕಾರ್ಯಕ್ರಮದಲ್ಲಿ ಯರಗುಂಟೆಯ ಶ್ರೀ ಪರಮೇಶ್ವರ ಸಾಮೀಜಿ




ದಾವಣಗೆರೆ, ಜ.10- ಬಡವರ, ಶಕ್ತಿಹೀನರ, ದುರ್ಬಲರ, ರೋಗಿಗಳ ಮತ್ತು ಸಂಕಷ್ಟಗಳಿಗೆ ಒಳಗಾಗಿರುವವರ ಸೇವೆ ಮಾಡಿದರೆ, ಭಗವಂತನ ಸೇವೆ ಮಾಡಿದಂತೆಯೇ ಆಗುತ್ತದೆ ಎಂದು ಯರಗುಂಟೆ ಗ್ರಾಮದ ಶ್ರೀ ಪರಮೇಶ್ವರ ಸಾಮೀಜಿ ಅಭಿಪ್ರಾಯಪಟ್ಟರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಟ್ರಸ್ಟ್ ಕಚೇರಿಯಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ 85ನೇ ಸೈಕಲ್ ಮತ್ತು 3 ತಿಂಡಿ ಗಾಡಿಗಳ ವಿತರಣಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಈ ಕಾರ್ಯಕ್ರಮದಂತೆ ಯೋಗ್ಯ ಸತ್ಕಾರ್ಯಗಳು ಕರುಣಾ ಟ್ರಸ್ಟಿನಿಂದ ನಡೆಯುತ್ತಿವೆ, ಇದು ಸಂತಸದ ವಿಷಯ. ಎಡಗೈಲಿ ಕೊಟ್ಟದ್ದು ಬಲಗೈಗೆ ಗೊತ್ತಾಗಬಾರದು ಎನ್ನುವಂತೆ, ದಾನಿಗಳು ಸಹೃದಯದಿಂದ ದಾನವಿತ್ತು ಸಹಕರಿಸುತ್ತಿದ್ದಾರೆ. ಅವರ ಹಣ ವ್ಯರ್ಥವಾಗದಂತೆ ಸತ್ಕಾರ್ಯಕ್ಕೆ ಕರುಣಾ ಟ್ರಸ್ಟ್ ಉಪಯೋಗಿಸುತ್ತಿದೆ. ಇದರ ಸದುಪಯೋಗವನ್ನು ಪ್ರತಿಯೊಬ್ಬ ಬಡವರು ಪಡೆದುಕೊಳ್ಳಬೇಕು ಮತ್ತು ದಾನಿಗಳು ಹೆಚ್ಚಿನ ಮಟ್ಟದಲ್ಲಿ ಧನ ಸಹಾಯವಿತ್ತು ಸಹಕರಿಸಬೇಕು ಎಂದು ಶ್ರೀಗಳು ಕರೆ ನೀಡಿದರು.

ಕರುಣಾ ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಕರುಣಾ ಟ್ರಸ್ಟ್ ಇದ್ದವರು ಮತ್ತು ಇಲ್ಲದವರ ನಡುವೆ ಸೇತುವೆಯಾಗಿ ಕಾರ್ಯವೆಸಗುತ್ತಿದೆ. ಇಂದು 85ನೇ ಸೈಕಲ್ ಮತ್ತು 3 ತಿಂಡಿ ಗಾಡಿಗಳನ್ನು ಬಡವರಿಗೆ ನೀಡುವುದರ ಮೂಲಕ ಸ್ವಯಂ ಉದ್ಯೋಗಕ್ಕಾಗಿ ಪ್ರೇರೇಪಿಸುತ್ತಿದ್ದೇವೆ. ಇದಕ್ಕೆ ದಾನಿಗಳು ಮತ್ತು ಫಲಾನುಭವಿಗಳ ಬೆಂಬಲಬೇಕು ಎಂದು ತಿಳಿಸಿದರು.

ಟ್ರಸ್ಟಿನ ಮತ್ತೋರ್ವ ನಿರ್ದೇಶಕ ಪ್ರೊ. ಎಂ. ಬಸವರಾಜ್ ಮಾತನಾಡಿ, ಕಷ್ಟ ಶಾಶ್ವತವಲ್ಲ. ಇಂದು ಕಷ್ಟವಿರಬಹುದು ನಾಳೆ ನೀವೇ ಬೇರೆಯವರಿಗೆ ಸಹಾಯ ಮಾಡುವಂತಾಗಬಹುದು. ತಮಗಿಂತ ಕಷ್ಟದಲ್ಲಿರುವವರಿಗೆ ಸಹಾಯ ಮಾಡಿ ಎಂದು ಫಲಾನುಭವಿಗಳನ್ನುದ್ದೇಶಿಸಿ ಮಾತನಾಡಿದರು.

ಟ್ರಸ್ಟಿನ ದಾನಿಗಳಾದ ಸಿ.ಎನ್. ಜಯಪ್ರಕಾಶ್, ಎ.ಕಿರಣ್ ಕುಮಾರ್, ಡಾ. ಹೆಚ್.ಜಿ. ಶ್ರೀಕಂಠಪ್ಪ ಟ್ರಸ್ಟ್ ಅರ್ಹರಿಗೆ ಸೈಕಲ್ ಮತ್ತು ತಿಂಡಿ ಗಾಡಿ ನೀಡಿರುವುದರ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಕರುಣಾ ಟ್ರಸ್ಟಿನ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ ಸ್ವಾಗತಿಸಿದರು. ಮಧುಸೂದನ್ ವಂದಿಸಿದರು. ಬಸವರಾಜ್ ಒಡೆಯರ, ಜಯ್ಯಣ್ಣ, ಭೈರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಹಾವೇರಿ ಜಿಲ್ಲಾ ಹದಿಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಆಹ್ವಾನ

ಹಾವೇರಿ, ಜ.10- ಹಾವೇರಿ ಜಿಲ್ಲಾ 13ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬರುವ ಫೆಬ್ರವರಿ 9 ಮತ್ತು 10 ರಂದು ರಾಣೇಬೆನ್ನೂರಿನಲ್ಲಿ ಆಯೋಜಿಸಲು ನಿರ್ಣಯಿಸಲಾಗಿದೆ. ಹಾವೇರಿ ಜಿಲ್ಲೆಯ ಆಸಕ್ತರು 20 ಸಾಲುಗಳಿಗೆ ಮೀರದಂತೆ ತಮ್ಮ ಎರಡು ಸ್ವ-ರಚಿತ ಕವನಗಳ ಹಸ್ತಪ್ರತಿ ಹಾಗೂ ಆಧಾರ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಅಧ್ಯಕ್ಷರು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಭವನ, ವಾಗೀಶ ನಗರ, 12ನೇ ಅಡ್ಡ ರಸ್ತೆ ರಾಣೇಬೆನ್ನೂರು ಈ ವಿಳಾಸಕ್ಕೆ ಇದೇ ದಿನಾಂಕ 16 ರೊಳಗಾಗಿ ಕಳುಹಿಸಬಹುದು.

ಭಾಗವಹಿಸುವರಿಗೆ ವಯಸ್ಸಿನ ನಿರ್ಬಂಧವಿರುವುದಿಲ್ಲ. ಬಂದಂತಹ ಕವಿತೆಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಿ, ಕವಿಗೋಷ್ಠಿಯಲ್ಲಿ ಭಾಗವಹಿಸುವವರ ಹೆಸರುಗಳನ್ನು ಅಂತಿಮಗೊಳಿಸುತ್ತದೆ ಎಂದು ರಾಣೇಬೆನ್ನೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರೇಶ ಜಂಬಿಗಿ ಅವರು ತಿಳಿಸಿದ್ದಾರೆ.

## ಕರುಣಾದಲ್ಲಿ ಇಂದು 'ಬುದ್ಧ ಪ್ರಜ್ಞೆ..' ಚಿಂತನೆ

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 6 ಕ್ಕೆ 'ಚಿಂತನೆ ಮತ್ತು ಸಂವಾದ' ಕಾರ್ಯಕ್ರಮ ದಲ್ಲಿ 'ಬುದ್ಧ ಪ್ರಜ್ಞೆ ಪ್ರತಿಯೊಬ್ಬರಿಗೂ ಬೇಕು' ವಿಷಯ ಕುರಿತಂತೆ ಶಿವನಕೆರೆ ಬಸವ ಲಿಂಗಪ್ಪನವರು ಮಾತನಾಡುವರು. ಕಾರ್ಯ ಕ್ರಮದಲ್ಲಿ ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ ಆರ್.ಆರ್. ಕುಸಗೂರು, ಮಲ್ಲಾ ಬಾದಿ ಬಸವರಾಜ ಭಾಗವಹಿಸು ವರು.

## ನಾಡಿದ್ದು ಕೆ.ಸೆಟ್ ಪರೀಕ್ಷೆ ನಗರದಲ್ಲಿ 25 ಕೇಂದ್ರಗಳು

ದಾವಣಗೆರೆ,ಜ. 10 - ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕೆಸೆಟ್ ಪರೀಕ್ಷೆ ನಡೆಯುತ್ತಿದ್ದು, ನಗರದ 25 ಕೇಂದ್ರಗಳಲ್ಲಿ ಇದೇ ದಿನಾಂಕ 13 ರಂದು ಪರೀಕ್ಷೆ ನಡೆಯಲಿದ್ದು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಪರೀಕ್ಷೆ ನಡೆಸಬೇಕೆಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಪರೀಕ್ಷಾ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೆಸೆಟ್ ಪರೀಕ್ಷೆಯು ದಿನಾಂಕ 13 ರಂದು ಬೆಳಗ್ಗೆ 10 ರಿಂದ 11 ರವರೆಗೆ ಮೊದಲ ಪತ್ರಿಕೆ ಮತ್ತು ಮಧ್ಯಾಹ್ನ 12 ರಿಂದ 2 ಗಂಟೆಯವರೆಗೆ ಎರಡನೇ ಪತ್ರಿಕೆ ಪರೀಕ್ಷೆ ನಡೆಯಲಿದೆ. ಒಟ್ಟು ನಗರದಲ್ಲಿ ಸ್ಥಾಪಿಸಿರುವ 25 ಕೇಂದ್ರಗಳಲ್ಲಿ 11149 ಅಭ್ಯರ್ಥಿಗಳು ಪರೀಕ್ಷೆ ಬರೆಯುವರು.

ಅಭ್ಯರ್ಥಿಗಳು ಯಾವುದೇ ಮೊಬೈಲ್, ಎಲೆಕ್ಟ್ರಾನಿಕ್ಸ್ ವಸ್ತುಗಳು, ಕ್ಯಾಲ್ಕುಲೇಟರ್‌ಗಳನ್ನು ಕೇಂದ್ರದೊಳಗೆ ತೆಗೆದುಕೊಂಡು ಬರುವಂತಿಲ್ಲ. ಸುಗಮ ಮತ್ತು ಶಾಂತಯುತ ಪರೀಕ್ಷೆ ಮತ್ತು ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟಲು ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗುತ್ತದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ನಾರಾಯಣಗೌಡ್ರು ಬಿಡುಗಡೆ : ಕರವೇ ಸಂಭ್ರಮ



ದಾವಣಗೆರೆ,ಜ.10- ವಾಣಿಜ್ಯ ಮಳಿಗೆಗಳ ಆಂಗ್ಲ ಭಾಷೆಯ ನಾಮಫಲಕಗಳ ವಿರುದ್ಧ ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಬಂಧನಕ್ಕೊಳಗಾಗಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ್ರು ಇಂದು ಬಿಡುಗಡೆಯಾದ ಹಿನ್ನೆಲೆಯಲ್ಲಿ ಕರವೇ ಜಿಲ್ಲಾ ಘಟಕದಿಂದ ಸಂಭ್ರಮಾಚರಣೆ ನಡೆಸಲಾಯಿತು.

ಕರವೇ ಜಿಲ್ಲಾ ಕಚೇರಿ ಬಳಿ ಪಟಾಕಿ ಸಿಡಿಸಿ ಕೇಕ್ ಕಟ್ ಮಾಡುವ ಮೂಲಕ ಸಂಭ್ರಮಾಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಸರ್ಕಾರ ಕನ್ನಡಪರ ಹೋರಾಟಗಾರರನ್ನು ಹತ್ತಿಕ್ಕುವ ಹುನ್ನಾರ ನಡೆಸಿದೆ. ಕರವೇ ರಾಜ್ಯಾಧ್ಯಕ್ಷರ ಮೇಲೆ ಸುಳ್ಳು ಕೇಸು ದಾಖಲು ಮಾಡಿ 14 ದಿನ ಜೈಲು ಅನುಭವಿಸುವಂತೆ ಮಾಡಿತು. ಮತ್ತೆ ಇವರನ್ನು ಕುಗ್ಗಿಸುವ ಸಲುವಾಗಿ ಹಳೇ ಕೇಸುಗಳನ್ನು ಹಾಕಿ ಮತ್ತೆ ಜೈಲಿಗೆ ಸೇರಿಸಿದರು. ನಾರಾಯಣ ಗೌಡರು ಇಂಥ ಜೈಲು, ಲಾಠಿ ಏಟು, ಕೇಸಿಗೆ ಹೆದರುವವರಲ್ಲ. ಕನ್ನಡದ ನಾಮಫಲಕ ವಿಚಾರವಾಗಿ ಹೋರಾಟ ಮಾಡಿದ್ದಕ್ಕೆ ಜಯ ಸಿಕ್ಕಿದೆ ಎಂದು ಹೇಳಿದರು.

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಹಾನಗರ ಪಾಲಿಕೆ, ನಗರಸಭೆ ವತಿಯಿಂದ ಅಂಗಡಿ ಮುಂಗಟ್ಟುಗಳಿಗೆ ಜಾಹೀರಾತು ಫಲಕದಾರರಿಗೆ ನೋಟಿಸ್ ಕೊಡುವ ಕೆಲಸ ಮಾಡುತ್ತದೆ. ಕನ್ನಡದ ನಾಮಫಲಕ ಕಡ್ಡಾಯ ಕರ್ನಾಟಕ ರಕ್ಷಣಾ ವೇದಿಕೆಗೆ ಮತ್ತೊಂದು ಮೈಲುಗಲ್ಲಾಗಿದೆ ಎಂದು ಅವರು ಹೇಳಿದರು.

ಫೆಬ್ರವರಿ 28 ನಂತರ ರಾಜ್ಯದಲ್ಲಿ ಎಲ್ಲಾ ನಾಮಫಲಕಗಳು ಸರ್ಕಾರ ಹೇಳಿದಂತೆ ಶೇಕಡ 60ರಷ್ಟು ಕನ್ನಡದಲ್ಲಿ ಇರಬೇಕು. ಇಲ್ಲವಾದರೆ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಬೇಕಾಗುತ್ತದೆ ಎಂದು ರಾಮೇಗೌಡ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಘಟಕ ಅಧ್ಯಕ್ಷೆ ಶ್ರೀಮತಿ ಬಸಮ್ಮ, ಮಂಜುಳಾ ಮಹಾಂತೇಶ್, ಶಾಂತಮ್ಮ, ಮಂಜುಳಾ ಗಣೇಶ್, ಸುಜಾತ, ಜಿ. ಎಸ್. ಸಂತೋಷ್, ಮಂಜುಶ್ರೀ ಗೌಡ, ಮಹೇಶ್ವರಪ್ಪ, ಅಭಿಷೇಕ ಎಂ.ಡಿ., ರಫೀಕ್, ತನ್ವೀರ್, ಭಾಷಾ ಸಾಬ್, ಅಲ್ಲಾಭಕ್ಷಿ, ಮೆಹಬೂಬ್, ಪಕೀರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಸಿಇಓ ತಾಯಿಯಿಂದ ಪೂರ್ವ ನಿಯೋಜಿತ ಹತ್ಯೆ : ಶಂಕೆ

ಬೆಂಗಳೂರು, ಜ. 10 – ಬೆಂಗಳೂರಿನ ಕೃತಕ ಬುದ್ಧಿವಂತಿಕೆ ನವೋದ್ಯಮದ ಸಿ.ಇ.ಒ. ತಾಯಿ ತನ್ನ ನಾಲ್ಕು ವರ್ಷದ ಮಗುವನ್ನು ಪೂರ್ವನಿಯೋಜಿತವಾಗಿ ಹತ್ಯೆ ಮಾಡಿರುವುದಾಗಿ ಪೊಲೀಸರು ಶಂಕಿಸಿದ್ದಾರೆ.

ಗೋವಾದಲ್ಲಿ 39 ವರ್ಷದ ಸುಚನಾ ಸೇಠ್ ಮಗುವಿನ ಹತ್ಯೆ ಮಾಡಿದ್ದರು. ವಿರಸಿತ ಪತಿ ವೆಂಕಟ ರಮಣ್ ಅವರು ಬೆಂಗಳೂರಿನ ರಾಜಾಜಿ ನಗರದಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಮಗುವಿನ ಅಂತ್ಯಕ್ರಿಯೆ ನೆರವೇರಿಸಿದರು.

ಹತ್ಯೆ ನಡೆದ ಸ್ಥಳದಲ್ಲಿ ಗೋವಾ ಪೊಲೀಸರು ಕೆಮ್ಮಿನ ಔಷಧಿಯ ಎರಡು ಖಾಲಿ ಬಾಟಲಿಗಳನ್ನು ಪತ್ತೆ ಮಾಡಿದ್ದಾರೆ. ಮಗುವಿಗೆ ಅತಿಯಾದ ಔಷಧ ನೀಡಿ ಹತ್ಯೆ ಮಾಡಲು ಪೂರ್ವ ನಿಯೋಜಿತ ಸಂಚು ನಡೆಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಮಗುವನ್ನು ಬಟ್ಟೆ ಇಲ್ಲವೇ ದಿಂಬಿನಿಂದ ಉಸಿರುಗಟ್ಟಿಸಿ ಹತ್ಯೆ ಮಾಡಲಾಗಿದೆ ಎಂಬುದು ಮರಣೋತ್ತರ ಪರೀಕ್ಷೆಯಿಂದ ಪತ್ತೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಉಸಿರು ಗಟ್ಟಿಸಿ ಹತ್ಯೆಗೈಯ್ಯುವಾಗ ಮಗು ಯಾವುದೇ ಹೋರಾಟ ನಡೆಸಿದ ಲಕ್ಷಣಗಳು ಮರಣೋತ್ತರ ಪರೀಕ್ಷೆಯಲ್ಲಿ ಕಂಡು ಬಂದಿಲ್ಲ. ಮಗುವಿಗೆ ಕೆಮ್ಮಿನ ಔಷಧಿಯನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಿ ಹತ್ಯೆ ಮಾಡಿರುವ ಸಾಧ್ಯತೆಯ ಬಗ್ಗೆ ತನಿಖೆ ನಡೆಸುತ್ತಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋವಾದ ಅಪಾರ್ಟ್‌ಮೆಂಟ್‌ನ ಸಿಬ್ಬಂದಿಯಿಂದ ಮಹಿಳೆ ಸಣ್ಣ ಕೆಮ್ಮಿನ ಔಷಧಿ ಬಾಟಲಿ ತರಿಸಿಕೊಂಡಿದ್ದರು. ಇನ್ನೊಂದು ಬಾಟಲಿಯನ್ನು ಮೊದಲೇ ತಂದಿರಬಹುದು ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಪೊಲೀಸ್ ವಿಚಾರಣೆ ವೇಳೆ ಸುಚನಾ ಸೇಠ್ ಹತ್ಯೆ ಮಾಡಿಲ್ಲ ಎಂದು ಹೇಳಿದ್ದಾಳೆ. ನಾನು ನಿದ್ರೆಯಿಂದ ಏಳುವ ವೇಳೆಗಾಗಲೇ ಮಗು ಸಾವನ್ನಪ್ಪಿತ್ತು ಎಂಬ ಹೇಳಿಕೆ ನೀಡಿದ್ದಾಳೆ.

## ದಲಿತ್ ಇಂಡಿಯನ್ ಛೇಂಬರ್ ಇಂಡಸ್ಟ್ರಿ ಆಫ್ ಕಾಮರ್ಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಮಂಜುನಾಥ ಕಬ್ಬೂರು



ದಾವಣಗೆರೆ, ಜ.10- ದಲಿತ್ ಇಂಡಿಯನ್ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಡಿಐಸಿಸಿಐ) ವತಿಯಿಂದ ಉದ್ಯಮ ಸ್ಥಾಪನೆಗೆ ಇರುವ ಅವಕಾಶಗಳು ಮತ್ತು ಸಾಲ ಸೌಲಭ್ಯ ಕುರಿತು ನಗರದ ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ನಲ್ಲಿ ಇಂದು ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಉದ್ಘಾಟಿಸಿದರು. ಡಿಐಸಿಸಿಐ ಬುಡಕಟ್ಟು ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಡಿ. ರಾಜಾನಾಯಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನ್ಯಾಷನಲ್ ಎಸ್.ಸಿ./ಎಸ್.ಟಿ. ಹಬ್ ಶಾಖಾ ಮುಖ್ಯಸ್ಥರಾದ ಶ್ರೀಮತಿ ಎ. ಕೋಕಿಲಾ, ಕೆ.ಎಸ್.ಎಫ್.ಸಿ. ಶಾಖಾ ಮುಖ್ಯಸ್ಥ ಮಾಲತೇಶ್ ಬಿ. ಹೆಮ್ಮಾಡಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಭಾರಿ ಜಂಟಿ ನಿರ್ದೇಶಕ ರಾಜೇಂದ್ರ, ನಾಮದೇವ್ ಕದಂ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ದಲಿತ್ ಇಂಡಿಯನ್ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಡಿಐಸಿಸಿಐ) ಜಿಲ್ಲಾ ಘಟಕದ ಅಧ್ಯಕ್ಷರಾಗಿ ಮಂಜುನಾಥ ವೈ. ಕಬ್ಬೂರು ಅವರನ್ನು ನೇಮಕ ಮಾಡಲಾಯಿತು.

## ನಗರದಲ್ಲಿಂದು ಶೈಕ್ಷಣಿಕ ಸಮಾವೇಶ

ದಾವಣಗೆರೆ, ಜ. 10- ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾ ಶಾಖೆ ವತಿಯಿಂದ ನಾಳೆ ದಿನಾಂಕ 11 ರ ಗುರುವಾರ ಬೆಳಿಗ್ಗೆ 10 ಕ್ಕೆ ನಗರದ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಶೈಕ್ಷಣಿಕ ಸಮಾವೇಶ, ನಿವೃತ್ತ ಪ್ರಾಚಾರ್ಯರು ಹಾಗೂ ನಿವೃತ್ತ ಉಪನ್ಯಾಸಕರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಸಿ.ಬಿ. ರವಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಸಮಾರಂಭವನ್ನು ಉದ್ಘಾಟಿಸುವರು. ಧಾರವಾಡದ ಹ್ಯೂಮನ್ ಮೈಂಡ್‌ಸೆಟ್ ಕೋಚ್ ಸೆಂಟರ್ ನ ಮಹೇಶ್ ಮಾಶ್ಯಾಳ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಬಿ. ಪಾಲಾಕ್ಷಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

ಬೋಧನೆಯಲ್ಲಿ ಮೌಲ್ಯಾಧರಿತ ಶಿಕ್ಷಣ ಕುರಿತು ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಡಾ.ಹೆಚ್.ವಿ. ವಾಮದೇವಪ್ಪ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಬೆಂಗಳೂರು ಅಧ್ಯಕ್ಷ ಎ.ಹೆಚ್. ನಿಂಗೇಗೌಡ, ಡಿಡಿಪಿಯು ಎಸ್.ಜಿ. ಕರಿಬಸಪ್ಪ, ಜಿಲ್ಲಾಧ್ಯಕ್ಷ ವೀರೇಶ್ ಎಸ್.ಒಡೇನಪುರ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಬಿ. ಪಾಲಾಕ್ಷಿ, ದೊಡ್ಡವೀರ ಪ್ರಭು, ಎಸ್.ಜಿ. ನಾಗರಾಜ್, ಮಂಜಪ್ಪ ಎಫ್. ಹಿತ್ತಲಮನಿ ಉಪಸ್ಥಿತರಿದ್ದರು.

## ವಿವಾದಿತ ಹೇಳಿಕೆ, ವಕೀಲಗೆ ಶಿಕ್ಷೆ

(1ನೇ ಪುಟದಿಂದ) ಹೈಕೋರ್ಟ್ ನ್ಯಾಯಮೂರ್ತಿಗಳಾದ ಸುರೇಶ್ ಕುಮಾರ್ ಕೈತ್ ಹಾಗೂ ನೀನಾ ಬನ್ಸಾಲ್ ಕೃಷ್ಣ ಅವರನ್ನು ಒಳಗೊಂಡ ವಿಭಾಗೀಯ ಪೀಠ, ಹೇಳಿಕೆಯನ್ನು ವಾಪಸ್ ಪಡೆಯಲು ಮತ್ತೊಂದು ಅವಕಾಶ ನೀಡಿತು. ವಕೀಲ ಒಪ್ಪದೇ ಇದ್ದಾಗ ಜೈಲು ಶಿಕ್ಷೆ ಪ್ರಕಟಿಸಲಾಗಿದೆ.

## ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳ ಲಂಬಾಣಿ ನೃತ್ಯ



**ಎಲೆಬೇತೂರು**

ಎಲೆಬೇತೂರು, ಜ. 10 - ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಹಾಗೂ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ 2023- 24 ನೇ ಸಾಲಿನ ವಿದ್ಯಾರ್ಥಿ ಸಂಘದ ಸಮಾರೋಪ ಮತ್ತು ಶಾಲಾ ವಾರ್ಷಿಕೋತ್ಸವ ಹಾಗೂ ತರಳಬಾಳು ಸಿರಿ ಸಂಭ್ರಮದಲ್ಲಿ ಚಮಕ್ಕು ಚಮಕ್ ಚೋರಿನಾಚೆ ಜಾನಪದ ನೃತ್ಯಕ್ಕೆ ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಲಂಬಾಣಿ ನೃತ್ಯ ಮಾಡಿ, ಪ್ರೇಕ್ಷಕರ ಗಮನ ಸೆಳೆದರು.

## ಕೆಟಿಜೆ ನಗರದಲ್ಲಿ ಇಂದು ಕಾರ್ತಿಕೋತ್ಸವ

ದಾವಣಗೆರೆ ಕೆ.ಟಿ.ಜೆ ನಗರ 2ನೇ ಕ್ರಾಸ್‌ನಲ್ಲಿರುವ ಶ್ರೀ ಗುರು ರೇವಣಸಿದ್ದೇಶ್ವರ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಮಹಾಗಣಪತಿ, ಶ್ರೀ ಶನೈಶ್ಚರ, ಶ್ರೀ ನವಗ್ರಹ ಸನ್ನಿಧಿ, ಶ್ರೀ ದುರ್ಗಾದೇವಿ ದೇವಸ್ಥಾನದ ಸೇವಾ ಸಮಿತಿ ಇವುಗಳ ಆಶ್ರಯದಲ್ಲಿ ಕಡೇ ಕಾರ್ತಿಕೋತ್ಸವವನ್ನು ಇಂದು ರಾತ್ರಿ 8.30 ಕ್ಕೆ ಹಮ್ಮಿಕೊಳ್ಳಲಾಗಿದೆ. ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮಹಾ ಮಂಗಳಾರತಿ ಹಾಗೂ ಸಂಜೆ 5.30 ಕ್ಕೆ ರಥೋತ್ಸವ ನಡೆಯಲಿದೆ.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮವಾಸ್ಯೆ ಪೂಜೆ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಎಳ್ಳು ಅಮವಾಸ್ಯೆ ಪ್ರಯುಕ್ತ ಇಂದು ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ದೇವರಾಜ ಅರಸು ಬಡಾವಣೆಯ ಡಾ. ನಾಗರತ್ನಮ್ಮ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

### ಓದುಗರ ಪತ್ರ

## ತಪ್ಪು ಮಾಡುತ್ತಲೇ ಇರುವ ದ್ವಿಚಕ್ರ ವಾಹನ ಚಾಲಕರು !

ಮಾನ್ಯರೇ,

ದಾವಣಗೆರೆ ಸ್ಮಾರ್ಟ್ ಸಿಟಿ ಆಗುತ್ತಿದ್ದರೂ, ನಾವು ಇನ್ನೂ ಸ್ಮಾರ್ಟ್ ಆಗಬೇಕಿದೆ. ಜನಸಾಮಾನ್ಯರು ಸಂಚಾರಿ ನಿಯಮಗಳನ್ನು ಪಾಲಿಸುವುದರಲ್ಲಿ ಯಾಕೋ ಏನೋ ಇನ್ನೂ ತಾತ್ಸಾರದ ಭಾವನೆ. ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನಗಳ ಚಾಲನೆ, ತ್ರಿಬಲ್ ರೈಡಿಂಗ್, ಸರ್ಕಲ್ ಬಳಿ ಇರುವ ಸಿಗ್ನಲ್ ಗಮನಿಸದೇ ಹೋಗುವುದು, ಹೆಚ್ಚಿನ ವೇಗವಾಗಿ ವಾಹನ ಚಾಲನೆ, ಕರ್ಕಶ ಉಳ್ಳ ಹಾರ್ನ್ ಬಳಕೆ, ಒಮ್ಮುಖ ರಸ್ತೆಯಲ್ಲಿ ವಾಹನ ಚಾಲನೆ ದಂಡಾರ್ಹ ಎಂದು ತಿಳಿದಿದ್ದರೂ... ತಪ್ಪು ಮಾಡುತ್ತಲೇ ಇದ್ದಾರೆ.

ಆಗಾಗ್ಗೆ, ಪೊಲೀಸ್ ಇಲಾಖೆಯವರು ವಾಹನ ಸವಾರರು ಯಾರ‍್ಯಾರು... ಎಷ್ಟು ಬಾರಿ ತಪ್ಪು ಮಾಡಿದ್ದಾರೆ...ಎಷ್ಟು ದಂಡ ವಸೂಲಿ ಮಾಡಿದ್ದಾರೆ ಎಂಬುದನ್ನು ಆಗೊಮ್ಮೆ, ಈಗೊಮ್ಮೆ (ಮೂರು ತಿಂಗಳು... ಆರು ತಿಂಗಳಿಗೊಮ್ಮೆ) ಪತ್ರಿಕೆಗಳಲ್ಲಿ ಓದಿದ್ದೇನೆ. ಹೀಗಿದ್ದರೂ, ವಾಹನ ಸವಾರರು ತಪ್ಪು ತಿದ್ದಿಕೊಳ್ಳುತ್ತಿಲ್ಲ.

ನನ್ನದೊಂದು ಸಲಹೆ. ಈಗ ಎಲ್ಲೆಡೆ ಸಿ.ಸಿ.ಕ್ಯಾಮರಾಗಳು ಇದ್ದಮೇಲೆ ತಪ್ಪು ಮಾಡುವವರನ್ನು ದಂಡಿಸುವುದು ಕಷ್ಟವೇನಲ್ಲ. ವಾಹನ ಚಾಲನೆ ನಿಯಮಗಳನ್ನು ಪಾಲಿಸದೇ ಇರುವ ಸವಾರರಿಗೆ ದಂಡಕಟ್ಟಲು ನೋಟಿಸ್ ನೀಡಿದರೆ ಸಾಲದು, ಪ್ರತಿವಾರವೂ ದಾವಣಗೆರೆಯ ಯಾವ ಯಾವ ಸರ್ಕಲ್ ಗಳಲ್ಲಿ ಎಷ್ಟು ಜನರು ಎಷ್ಟೋ ಸಲ ತಪ್ಪು ಮಾಡಿದ್ದಾರೆ... ಎಷ್ಟು ಮಂದಿಗೆ ನೋಟಿಸ್ ನೀಡಿದ್ದಾರೆ... ದಂಡ ಎಷ್ಟು ವಸೂಲಿ ಮಾಡಲಾಗಿದೆ ಎಂಬುದನ್ನು ಕಡ್ಡಾಯವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಬೇಕು. ಆಗಾದರೂ ಯಾವ ಯಾವ ಸರ್ಕಲ್ ನಲ್ಲಿ ಸಿ.ಸಿ ಕ್ಯಾಮರಾ ಮೂಲಕ ಕಣ್ಗಾವಲು ಆಗ್ತಿದೆ... ತಪ್ಪು ಮಾಡಿದರೆ ಖಂಡಿತಾ ದಂಡ ತೆರಬೇಕಾಗುತ್ತದೆಂಬ ಭಯ ಬರಬಹುದು.

-ರಘುನಾಥರಾವ್ ತಾಪ್ಸೆ, ದಾವಣಗೆರೆ.

## 13 ವರ್ಷಗಳ ಬಳಿಕ ಆರೋಪಿ ಬಂಧನ

**ಉಪನ್ಯಾಸಕರ ಕೈ ಕತ್ತರಿಸಿದ ಪ್ರಕರಣ**

ನವದೆಹಲಿ, ಜ. 10 – 2010ರಲ್ಲಿ ಕೇರಳದ ಉಪನ್ಯಾಸಕರ ಕೈ ಕತ್ತರಿಸಿದ ಪ್ರಕರಣದ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಬಂಧಿಸಿದೆ.

ಪಿ.ಎಫ್.ಐ. ಪರ ಇರುವ ಸವದ್ ಎಂಬಾತ 13 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ. ಆತನ ಪತ್ತೆಗೆ 10 ಲಕ್ಷ ರೂ. ಬಹುಮಾನ ಘೋಷಿಸಲಾಗಿತ್ತು. ಆರೋಪಿಯನ್ನು ಕೇರಳದ ಕಣ್ಣೂರಿನಲ್ಲಿ ಬಂಧಿಸಲಾಗಿದೆ. ಕೇರಳದ ತೊಡುಪುಳದಲ್ಲಿ ಬಿ.ಕಾಂ. ವಿದ್ಯಾರ್ಥಿಗಳಿಗೆ ರೂಪಿಸಿದ ಆಂತರಿಕ ಪ್ರಶ್ನೆಪತ್ರಿಕೆಯಲ್ಲಿ ಕೇಳಲಾದ ಪ್ರಶ್ನೆಯೊಂದು ಇಸ್ಲಾಂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಿದೆ ಎಂದು ಅಸಮಾಧಾನಗೊಂಡಿದ್ದ ಸವದ್, ಉಪನ್ಯಾಸಕ ಟಿ.ಜೆ. ಜೋಸಫ್ ಅವರ ಕೈ ಕತ್ತರಿಸಿದ್ದ.

ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದ 19 ಜನರಿಗೆ ಇದುವರೆಗೂ ಶಿಕ್ಷೆಯಾಗಿದೆ. ಮೂವರಿಗೆ ಆಜೀವ ಹಾಗೂ 10 ಜನರಿಗೆ ಎಂಟು ವರ್ಷಗಳವರೆಗೆ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿದೆ. ಜೋಸೆಫ್ ಅವರು 2010ರ ಜುಲೈ 4ರಂದು ತಮ್ಮ ಕುಟುಂಬದವರೊಂದಿಗೆ ಚರ್ಚ್‌ನಿಂದ ಬರುತ್ತಿರುವಾಗ ಅವರ ಮೇಲೆ ಹಲ್ಲೆ ನಡೆಸಲಾಗಿತ್ತು. ಬಾಂಬ್ ಒಂದನ್ನು ಎಸೆದು ಜನರನ್ನು ಭೀತಿಗೊಳಿಸಲಾಗಿತ್ತು.

## ಅಪಪ್ರಚಾರದಿಂದ ವಿಶ್ವಕ್ಕೆ ದೊಡ್ಡ ಅಪಾಯ

**ಡಬ್ಲ್ಯೂ.ಇ.ಎಫ್.**

ನವದೆಹಲಿ, ಜ. 10 – ಮುಂದಿನ ಎರಡು ವರ್ಷಗಳಲ್ಲಿ ಭಾರತ ಹಾಗೂ ಅಮೆರಿಕ ಸೇರಿದಂತೆ ಹಲವಾರು ದೇಶಗಳಲ್ಲಿ ಚುನಾವಣೆ ನಡೆಯಲಿದ್ದು, ಇದರಲ್ಲಿ ವಿಶ್ವದ 300 ಕೋಟಿ ಜನ ಭಾಗಿಯಾಗಲಿದ್ದಾರೆ. ಈ ಸಂದರ್ಭದಲ್ಲಿ ಅಪಪ್ರಚಾರವೇ ಅತಿ ದೊಡ್ಡ ಅಪಾಯ ಎಂದು ವಿಶ್ವ ಆರ್ಥಿಕ ವೇದಿಕೆ (ಡಬ್ಲ್ಯೂ.ಇ.ಎಫ್.) ವರದಿಯೊಂದು ತಿಳಿಸಿದೆ.

ಮುಂದಿನ ಎರಡು ವರ್ಷಗಳಲ್ಲಿ ಭಾರತದಲ್ಲಿ ಅಪಪ್ರಚಾರ ಹಾಗೂ ದುಷ್ಪ್ರಚಾರಗಳು ಅತಿ ದೊಡ್ಡ ಅಪಾಯ ತರಲಿವೆ ಎಂದು 'ಗ್ಲೋಬಲ್ ರಿಸ್ಕ್ಸ್ ರಿಪೋರ್ಟ್' ವರದಿಯಲ್ಲಿ ತಿಳಿಸಲಾಗಿದೆ.

ನಂತರದ ಸ್ಥಾನದಲ್ಲಿ ಸೋಂಕು ರೋಗ, ಅಕ್ರಮ ಆರ್ಥಿಕ ಚಟುವಟಿಕೆ, ಆರ್ಥಿಕ ಅಸಮಾನತೆ ಹಾಗೂ ಕಾರ್ಮಿಕ ಕೊರತೆಗಳು ಬರುತ್ತವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಜನವರಿ 15ರಿಂದ ದಾವೋಸ್‌ನಲ್ಲಿ ಆರಂಭವಾಗಲಿರುವ ಐದು ದಿನಗಳ ವಾರ್ಷಿಕ ಸಭೆಗೆ ಮುಂಚೆ ಈ ವರದಿ ಬಿಡುಗಡೆ ಮಾಡಲಾಗಿದೆ.

ಅಲ್ಪಾವಧಿಯಲ್ಲಿ ಅಪಪ್ರಚಾರ ಹೆಚ್ಚು ಅಪಾಯ ತರಲಿದೆ. ದೀರ್ಘಾವಧಿಯಲ್ಲಿ ತೀವ್ರ ಹವಾಮಾನ ವೈಪರೀತ್ಯಗಳು ಸಮಸ್ಯೆ ತರಲಿವೆ. ಇದರಿಂದ ಜೀವವೈವಿಧ್ಯತೆ ಹಾಗೂ ಪರಿಸರ ಸಮತೋಲನಕ್ಕೆ ಹಾನಿಯಾಗಲಿದೆ ಎಂದು ತಿಳಿಸಲಾಗಿದೆ.

ಭಾರತ ಸೇರಿದಂತೆ ಹಲವಾರು ದೇಶಗಳಿಗೆ ಮುಂದಿನ ಎರಡು ವರ್ಷಗಳಲ್ಲಿ ಚುನಾವಣೆಗಳು ನಡೆಯಲಿವೆ. ಈ ಚುನಾವಣೆಗಳಲ್ಲಿ 300 ಕೋಟಿ ಜನರು ಭಾಗಿಯಾಗಲಿದ್ದಾರೆ. ಇಂತಹ ಸಂದರ್ಭದಲ್ಲಿ ಅಪಪ್ರಚಾರ ಹೆಚ್ಚು ಹಾನಿ ತರಲಿದೆ. ಅಪಪ್ರಚಾರದಿಂದ ಹಿಂಸಾತ್ಮಕ ಘಟನೆಗಳು ನಡೆಯಬಹುದು ಎಂದು ಎಚ್ಚರಿಕೆ ನೀಡಲಾಗಿದೆ.

ಆದರೆ, ಅಪಪ್ರಚಾರ ತಡೆಯುವ ನಿಟ್ಟಿನಲ್ಲಿ ಸರ್ಕಾರಗಳು ಹೆಚ್ಚಿನ ಅಧಿಕಾರ ಪಡೆಯಲು ಮುಂದಾದರೆ ಅದೂ ಸಮಸ್ಯೆಗೆ ಕಾರಣವಾಗಲಿದೆ. ಸರ್ಕಾರ ಮಾಹಿತಿಯ ಮೇಲೆ ಹೆಚ್ಚು ನಿಯಂತ್ರಣ ಹೊಂದಿದರೆ ಜನರ ಸ್ವಾತಂತ್ರ್ಯಕ್ಕೆ ಕಡಿವಾಣ ಬೀಳಲಿದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ರತ್ನಮ್ಮ ಕೋಂ ಲೇಟ್ ಕೆ.ಎಂ. ಷಣ್ಮುಖಪ್ಪ**, ವಾಸ: #1870/72, ಮಹೇಶ್ ಪಿ.ಯು. ಕಾಲೇಜು ಹತ್ತಿರ, 7ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ಪ್ರಕಟಣೆ ಏನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮಾಲೀಕರಿರುತ್ತಾರೆ ಹಾಗೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ, ದಾವಣಗೆರೆ ಎ.ಪಿ.ಎಂ.ಸಿ. ಕಮಿಟಿಯವರು ನನ್ನ ಕಕ್ಷಿದಾರರ ಮಾವ ಕೆ.ಜಿ. ಮಲ್ಲಿಕಾರ್ಜುನಪ್ಪ ಮತ್ತು ಸಹೋದರರು ಇವರ ಫರ್ಮ್‌ನ ಪರವಾಗಿ ಬರೆದುಕೊಟ್ಟ ಅಸಲು ಕ್ರಯಪತ್ರದ **ದಿನಾಂಕ 19.10.1974ರ ಎಸ್.ಆರ್.ನಂ. 4216/1974-75**, ದಿನಾಂಕ 01.04.2003ರಂದು ದಾವಣಗೆರೆ ನಗರಸಭೆಯವರು ಅವರ ಗಂಡ ಕೆ.ಎಂ. ಷಣ್ಮುಖಪ್ಪ ಬಿನ್ ಲೇಟ್ ಕೆ.ಜಿ. ಮಲ್ಲಿಕಾರ್ಜುನಪ್ಪ ಇವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿರುವ ಅಸಲು ಹಿಂಬರಹ, ದಿನಾಂಕ 06.03.2013 ರಂದು ದಾವಣಗೆರೆ ಮಹಾನಗರಪಾಲಿಕೆಯವರು **ಡಿ.ಸಿ.ಬಿ./ಸಿಆರ್/288/2013-14** ರ ಹಿಂಬರಹದಂತೆ ಸದರಿ ಸ್ವತ್ತಿನ ಖಾತೆಯನ್ನು ನನ್ನ ಕಕ್ಷಿದಾರರ ಹೆಸರಿಗೆ ವರ್ಗಾವಣೆ ಮಾಡಿರುವ ಅಸಲು ಹಿಂಬರಹ ಹಾಗೂ ನನ್ನ ಕಕ್ಷಿದಾರರ ಮಗಳು ಶ್ರೀಮತಿ ಎಸ್. ಸೌಮ್ಯ ಕೋಂ ಪ್ರವೀಣಕುಮಾರ ಇವರು **ದಿನಾಂಕ 20.08.2015 ರಂದು ಎಸ್.ಆರ್. ನಂ.281/2015-16 ರಂತೆ** ಬರೆದುಕೊಟ್ಟಿರುವ ಅಸಲು ನೋಂದಾಯಿತ ಜಿ.ಪಿ.ಎ. ಪತ್ರ ಮತ್ತು ನನ್ನ ಕಕ್ಷಿದಾರರ ಮಗಳು ಕು। ಎಸ್. ಆಶಾ ಹಾಗೂ ಮಗನಾದ ಎಸ್. ಮಂಜುನಾಥ ಇವರುಗಳು ದಿನಾಂಕ 02.01.2016 ರಂದು ಎಸ್.ಆರ್.ನಂ. 660/2015-16 ರಂತೆ ಬರೆದುಕೊಟ್ಟಿರುವ ಅಸಲು ನೋಂದಾಯಿತ ಜಿ.ಪಿ.ಎ ಪತ್ರ ಇವುಗಳನ್ನು ನನ್ನ ಕಕ್ಷಿದಾರರು ದಿನಾಂಕ 30.10.2023 ರಂದು ಬಿ.ಐ.ಇ.ಟಿ ಕಾಲೇಜ್ ಹತ್ತಿರ ಇರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಲು ತೆಗೆದುಕೊಂಡು ಹೋದಾಗ ಆಕಸ್ಮಿಕವಾಗಿ ಮೇಲ್ಕಂಡ ಅಸಲು ದಾಖಲೆಗಳು ಕಳೆದು ಹೋಗಿರುತ್ತವೆ. ಆ ಕಾರಣ ನನ್ನ ಕಕ್ಷಿದಾರರು ಸದರಿ ದಾಖಲೆಗಳ ದೃಢೀಕೃತ ನಕಲುಗಳನ್ನು ಪಡೆದುಕೊಂಡಿದ್ದು, ಸದರಿ ದಾಖಲೆಗಳ ಆಧಾರದ ಮೇಲೆ ಷೆಡ್ಯೂಲ್ ಸ್ವತ್ತನ್ನು **ದಿನಾಂಕ 14.12.2023 ರಂದು ಎಸ್.ಆರ್. ನಂ.15841/2023-24** ರಂತೆ ನೋಂದಣಿಯಾಗಿರುವ ಕ್ರಯಪತ್ರದ ಮೂಲಕ ಶ್ರೀ ಬಿ. ದುಗ್ಗೇಶಿ ಬಿನ್ ಲೇಟ್ ಭೀಮಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ.

ಸದರಿ ಅಸಲು ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ವಕೀಲರನ್ನಾಗಲೀ ಸಂಪರ್ಕಿಸಿ ಅವುಗಳನ್ನು ನನ್ನ ಕಕ್ಷಿದಾರರಿಗಾಗಲೀ ಅಥವಾ ವಕೀಲರಿಗಾಗಲೀ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ. ಸದರಿ ಸ್ವತ್ತಿನ ಬಗ್ಗೆ ಯಾರದೇ ಆಗಲೀ ತಂಟೆ ತಕರಾರು ಅಥವಾ ಹಕ್ಕು ಹಿತಾಸಕ್ತಿ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 7 ದಿನಗಳೊಳಗಾಗಿ ಕೂಡಲೇ ಕೆಳಕಂಡ ವಕೀಲರನ್ನು ಅಥವಾ ನನ್ನ ಕಕ್ಷಿದಾರರನ್ನು ಸಂಪರ್ಕಿಸಬೇಕಾಗಿ ಈ ಮೂಲಕ ಪ್ರಕಟಿಸಲಾಗಿದೆ.

**ಷೆಡ್ಯೂಲ್**

1) ದಾವಣಗೆರೆ ಸಿಟಿ, 4ನೇ ವಾರ್ಡ್, 6ನೇ ಡಿವಿಜನ್, ಎಪಿಎಂಸಿ ಮಾರುಕಟ್ಟೆ 'ಇ' ಬ್ಲಾಕ್‌ನಲ್ಲಿ ಬರುವ ಸೈಟ್ ನಂ. ಇ-21, ಡೋರ್ ನಂ. 1214/ಇ-21, ಸ್ವತ್ತಿನ ಸಂಖ್ಯೆ : 9582205736 ವಿಸ್ತೀರ್ಣ 13.716027 x36.576073 ಮೀಟರ್ = 501.6762 ಚ.ಮೀ.ವುಳ್ಳ ವಾಣಿಜ್ಯೋಪಯೋಗಿ ಸ್ವತ್ತು.

**(ಆರ್.ಟಿ. ವಿನಯ ಕುಮಾರ್)**
ವಕೀಲರು

## ಅಟಲ್ ಜನಸ್ನೇಹಿ ಕೇಂದ್ರಗಳಲ್ಲಿ ಕಾಗದ ರಹಿತ ಸೇವೆಗೆ ಅವಕಾಶ

ದಾವಣಗೆರೆ, ಜ. 10 - ಜಿಲ್ಲೆಯ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ವಿವಿಧ ಸೇವೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಸ್ನೇಹಿಯಾಗಿ ಕಾಗದ ರಹಿತ ಸೇವೆಯನ್ನು ನೀಡುವ ಸಲುವಾಗಿ ಈ ಕೆಳಗಿನ ಅಂಶಗಳಲ್ಲಿ ಸೇವೆ ಒದಗಿಸಲು ಕ್ರಮವಹಿಸಲಾಗಿದೆ.

ಅರ್ಜಿ ಸ್ವೀಕರಿಸಿದ ನಂತರ ಅರ್ಜಿದಾ ರರ ಮೊಬೈಲ್ ಸಂಖ್ಯೆಗೆ ಸ್ವೀಕೃತಿ ಎಸ್‌ಎಂಎಸ್ ಹಾಗೂ ಅರ್ಜಿದಾರರ ಇ- ಮೇಲ್‌ಗೆ ಸ್ವೀಕೃತಿ ಪತ್ರದ ಪಿಡಿಎಫ್ ಪ್ರತಿಯನ್ನು ಕಳು ಹಿಸಲಾಗುತ್ತಿದೆ. ಅರ್ಜಿಯ ಪ್ರತಿ ಹಂತ ದಲ್ಲಿನ ಪ್ರಕ್ರಿಯೆಯನ್ನು ಹಾಗೂ ಯಾವ ಹಂತದಲ್ಲಿ ಬಾಕಿ ಇದೆ ಎಂಬ ಮಾಹಿತಿ ಯನ್ನು ಅರ್ಜಿದಾರರ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಲಾಗುವುದು.

ಅರ್ಜಿ ವಿಲೇವಾರಿಯಾದ ನಂತರ, ಸಿದ್ದ ಗೊಂಡ ಪ್ರಮಾಣ ಪತ್ರವನ್ನು ಅರ್ಜಿದಾರರಿ ಗೆ ಈ ಪ್ರಮಾಣ ಪತ್ರದ ಪಿಡಿಎಫ್ ಪ್ರತಿ ಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅರ್ಜಿದಾರರ ಮೊಬೈಲ್‌ಗೆ ಎಸ್‌ಎಂಎಸ್ ಲಿಂಕ್ ಕಳುಹಿಸಲಾಗುತ್ತದೆ ಹಾಗೂ ಪ್ರಮಾಣ ಪತ್ರದ ಪಿಡಿಎಫ್ ಪ್ರತಿಯನ್ನು ಅರ್ಜಿದಾರರ ಇ-ಮೇಲ್‌ಗೆ ಕಳುಹಿಸಲಾಗು ತ್ತಿದೆ. ಅರ್ಜಿದಾ ರರು ಪ್ರಮಾಣ ಪತ್ರವನ್ನು ಮುದ್ರಣ ಮಾಡಿ ಕೊಳ್ಳ ಬಹುದು. ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದ್ದಾರೆ.

# ದೇಶದಲ್ಲಿನ 13 ಕೋಟಿ ಜನರು ಬಡತನ ರೇಖೆಯಿಂದ ಮೇಲಕ್ಕೆ



### ನಿಟುವಳ್ಳಿಯ ವಿಕಸಿತ ಭಾರತ ಸಂಕಲ್ಪ ಯಾತ್ರೆಯಲ್ಲಿ ಸಂಸದ ಜಿ.ಎಂ ಸಿದ್ದೇಶ್ವರ

ದಾವಣಗೆರೆ,ಜ.10- ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹಲವಾರು ಯೋಜನೆಗಳು ಜನರ ಜೀವನ ಮಟ್ಟವನ್ನು ಸುಧಾರಿಸಿದ್ದು, ದೇಶದ 13 ಕೋಟಿಗೂ ಅಧಿಕ ಜನರು ಬಡತನ ರೇಖೆಯಿಂದ ಹೊರ ಬಂದಿದ್ದಾರೆ. ಎಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ನಿಟ್ಟುವಳ್ಳಿಯಲ್ಲಿಂದು ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಗರ ಪ್ರದೇಶದ ನಿವಾಸಿಗಳಿಗಾಗಿ ಪ್ರಧಾನ ಮಂತ್ರಿ ನಗರ ವಸತಿ ಯೋಜನೆ, ಸ್ವ-ನಿಧಿ, ಸ್ಟಾಂಡ್ ಆಪ್ ಇಂಡಿಯಾ, ಅಮೃತ್ ಯೋಜನೆ, ಪ್ರಧಾನ ಮಂತ್ರಿ ಜನೌಷಧಿ, ಉಜ್ವಲಾ ಸೇರಿದಂತೆ 50 ಕ್ಕೂ ಅಧಿಕ ಯೋಜನೆಗಳ ಪ್ರಯೋಜನ ವನ್ನು ಪಡೆದುಕೊಳ್ಳುವಂತೆ ತಿಳಿಸಿದರು.

ಅಲ್ಲದೇ ಗ್ರಾಮೀಣ ಸೇರಿದಂತೆ ನಗರ, ಪಟ್ಟಣ ಪ್ರದೇಶದಲ್ಲಿ ವಿಶ್ವಕರ್ಮ, ಜನ್‌ಧನ್, ಮುದ್ರಾ, ಆಯುಷ್ಮಾನ್ ಸೇರಿದಂತೆ 70 ಕ್ಕೂ ಹೆಚ್ಚು ಯೋಜನೆ ಗಳನ್ನು ಜನರ ಕಲ್ಯಾಣಕ್ಕಾಗಿ ಜಾರಿಗೆ ತರಲಾಗಿದ್ದು, ಈ ಎಲ್ಲಾ ಯೋಜನೆಗಳ ಸದುಪಯೋಗವನ್ನು ಪಡೆದುಕೊಂಡು ಆರ್ಥಿಕವಾಗಿ ಸಬಲರಾಗುವಂತೆ ಸಂಸದರು ಕರೆ ನೀಡಿದರು.

ಈ ಯೋಜನೆಗಳಿಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸವಲತ್ತುಗಳ ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡು ವುದರ ಜೊತೆಗೆ ಯೋಜನೆಯಿಂದ ಹೊರಗೆ ಇರುವಂತಹ ಜನರನ್ನು ಯೋಜನಾ ವ್ಯಾಪ್ತಿಗೆ ತರುವ ಕೆಲಸವನ್ನು ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯ ಸರ್ಕಾರದ ಉಚಿತ ಯೋಜನೆಗಳು ಸರಿಯಾಗಿ ಜನರಿಗೆ ತಲುಪುತ್ತಿಲ್ಲ ಎಂದು ಟೀಕಿಸಿದ ಅವರು, ಕೇಂದ್ರ ಸರ್ಕಾರದ ಹಲವು ಯೋಜನೆಗಳು ನಿಜವಾದ ಮತ್ತು ಅರ್ಹ ಫಲಾನುಭವಿಗಳಿಗೆ ದೊರೆಯುತ್ತಿವೆ. ಕೇಂದ್ರ ಸರ್ಕಾರದ ಯಾವುದೇ ಯೋಜನೆಗಳನ್ನು ಪಡೆಯಲು ಯಾರಿಗೂ ಕೂಡ ಹಣವನ್ನು ನೀಡುವ ಅವಶ್ಯಕತೆಯಿಲ್ಲ, ಆದರೆ ಕೆಲವು ಸೇವಾ ಕೇಂದ್ರಗಳಲ್ಲಿ ಜನರಿಂದ ಹಣವನ್ನು ಪಡೆಯುತ್ತಿರುವುದು ಕೇಳಿ ಬಂದಿದ್ದು, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಉಜ್ವಲ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸಂಸದರು ಸೌಲಭ್ಯಗಳನ್ನು ವಿತರಿಸಿ ನಂತರ 2024ರ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಮೋದಿಯವರು ಗೆದ್ದು ಪ್ರಧಾನಿಯಾದರೆ ದೇಶದ ಚಿತ್ರಣ ಸಂಪೂರ್ಣ ಬದಲಾಗಲಿದೆ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಕೆ.ಪ್ರಸನ್ನಕುಮಾರ್, ಸದಸ್ಯರಾದ ಶ್ರೀಮತಿ ಉಮಾ ಪ್ರಕಾಶ್, ಕೆ.ಎಂ. ವೀರೇಶ್ ಮತ್ತು ಎಸ್.ಟಿ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್ ಹಾಗೂ ಲೀಡ್ ಬ್ಯಾಂಕ್ ಮ್ಯಾನೇಜರ್ ಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

## ಜಿಲ್ಲೆಯ ಜಬೀನಾ, ಜ್ಯೋತಿ ಅವರಿಗೆ ರಾಜ್ಯಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ



ದಾವಣಗೆರೆ, ಜ. 10- ಸಾವಿತ್ರಿ ಬಾಯಿ ಫುಲೆ ರವರ 193 ನೇ ಜಯಂತಿ ಅಂಗವಾಗಿ ದಲಿತ ವಿದ್ಯಾರ್ಥಿ ಪರಿಷತ್ತು ವತಿಯಿಂದ ಕೊಡ ಮಾಡುವ ರಾಜ್ಯಮ ಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿಯನ್ನು ದಾವಣಗೆರೆ ಜಿಲ್ಲೆಯ ಯುವ ಸಾಮಾಜಿಕ ಹೋರಾಟಗಾರ್ತಿಯೂ ಆಗಿರುವ ಜಗಳೂರು ತಾಲ್ಲೂಕಿನ ಜಾಡನಕಟ್ಟೆ ಸರ್ಕಾರಿ ಶಾಲೆಯ ಶಿಕ್ಷಕಿ ಕೆ.ಬಿ. ಜ್ಯೋತಿ ಮತ್ತು ಮಹಿಳೆಯರ, ಮಕ್ಕಳ ಹಕ್ಕುಗಳನ್ನು ರಕ್ಷಿಸುವಲ್ಲಿ, ನ್ಯಾಯ ದೊರಕಿಸಿ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಜಬೀನಾ ಖಾನಂ ಅವರಿಗೆ ಪ್ರಶಸ್ತಿ ಲಭಿಸಿದೆ.

ನಗರದ ಕು. ಜಬೀನಾ ಖಾನಂ ಅವರು ಸುಮಾರು ವರ್ಷಗಳಿಂದ ಮಹಿಳಾ ಪರ ಹೋರಾಟಗಳಲ್ಲಿ, ದಲಿತ ಪರ ಹೋರಾಟಗಳಲ್ಲಿ ಭಾಗವಹಿಸಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳನ್ನು ರಕ್ಷಿಸುವಲ್ಲಿ, ನ್ಯಾಯ ದೊ ರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮಹಿಳೆಯರಿಗಾಗಿ ಪ್ರತ್ಯೇಕ ಸೊಸೈಟಿ ನಿರ್ಮಿಸಿ, ಆರ್ಥಿಕ ಚಟುವ ಟಿಕೆಗಳಲ್ಲಿ ಮಹಿಳೆಯರು ತೊಡಗಿಸಿ ಕೊಳ್ಳುವಂತೆ ಪ್ರೇರಣೆ ನೀಡುತ್ತಿದ್ದಾರೆ.

ಅದೇ ರೀತಿಯಾಗಿ ಜಗಳೂರಿನ ಜಾಡನಕಟ್ಟೆಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಕೆ.ಬಿ. ಜ್ಯೋತಿ ಅವರು ಹಳ್ಳಿ ಗಾಡು ಪ್ರದೇಶದಲ್ಲಿ ನಡೆದುಕೊಂಡು ಹೋಗಿ ಪಾಠ ಮಾಡುವವರು. ಅತೀ ಹಿಂದುಳಿದ ಈ ಒಂದು ಶಾಲೆ ಯಲ್ಲಿ ಯಾವುದೇ ಸಹಕಾರ ವಿಲ್ಲದಿ ದ್ದರೂ, ಹಳ್ಳಿಯ ಜನರ ಭಾಗವಹಿಸು ವಿಕೆ ಇಲ್ಲದಿದ್ದರೂ, ಹೇಗಾದರೂ ಮಾಡಿ ಅತ್ಯಂತ ಹಿಂದುಳಿದ ಶಾಲೆ ಯನ್ನು ಮಾದರಿ ಶಾಲೆಯನ್ನಾಗಿ ರೂಪಿ ಸುವಲ್ಲಿ ಯಶಸ್ವಿಯಾಗಿದ್ದಾರೆ. ಮಕ್ಕಳಿಗೆ ಕೇವಲ ಶೈಕ್ಷಣಿಕ ಚಟುವಟಿಕೆಗಳಿಗೆ ಸೀಮಿತ ಮಾಡದೆ, ಸಾಮಾಜಿಕ ಮತ್ತು ಆರ್ಥಿಕವಾಗಿ ಬಲ ತುಂಬುತ್ತಿದ್ದಾರೆ. ಕೆಲವು ಜನಪರ ಸಂಘಟನೆಗಳ, ಸರ್ಕಾರೇತರ ಸಂಸ್ಥೆಗಳ ಸಹಾಯದಿಂದ ಸಮುದಾಯ ಸಂಘಟನೆಗಳ ಮೂಲಕ ಮಾದರಿ ಶಾಲೆಗೆ ಬೇಕಾದಂತಹ ಎಲ್ಲಾ ರೀತಿಯ ಅವಕಾಶ ಸೃಷ್ಟಿಸಿ, ಅವುಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಜಾಗೃತಿ ಮೂಡಿಸುವುದು ಹಾಗೂ ಮಾಸ್ಕ್‌ಗಳನ್ನು ಹಂಚುವುದು ಸೇರಿದಂತೆ ಇತರೆ ಸಾಮಾಜಿಕ ಸೇವೆಗಳನ್ನು ಮಾಡಿದ್ದಾರೆ. ವಿಶೇಷ ಚೇತನರಿಗೆ ಪರೀಕ್ಷೆಗಳನ್ನು ಬರೆಯಲು ನೆರವಾಗುವುದು ಅಷ್ಟೇ ಅಲ್ಲದೆ, ಜನ ಮೆಚ್ಚಿದ ಶಿಕ್ಷಕಿ ಪ್ರಶಸ್ತಿ, ಉತ್ತಮ ನಲಿ-ಕಲಿ ಶಿಕ್ಷಕಿ ಪ್ರಶಸ್ತಿ, ಶಿರೋಸ್ ಪ್ರಶಸ್ತಿ ಸೇರಿದಂತೆ ಇನ್ನು ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಜಿಲ್ಲೆಯಿಂದ ಆಯ್ಕೆಯಾದ ಪ್ರಶಸ್ತಿ ಪುರಸ್ಕೃತರಿಗೆ ದಲಿತ ವಿದ್ಯಾರ್ಥಿ ಪರಿಷತ್ತು ಜಿಲ್ಲಾಧ್ಯಕ್ಷರೂ, ಮಲೇ ಬೆನ್ನೂರು ಪುರಸಭೆ ಸದಸ್ಯರೂ ಆದ ಸಾಬೀರ್ ಅಲಿ, ಕಾರ್ಯದರ್ಶಿ ಆನಂದ್ ನಾಯ್ಕ್ ಅಭಿನಂದಿಸಿದ್ದಾರೆ.

## ದಾನಮ್ಮ ದೇವಸ್ಥಾನದಲ್ಲಿ ಇಂದು ಎಳ್ಳು ಅಮಾವಾಸ್ಯೆ



ದಾವಣಗೆರೆ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಎಳ್ಳು ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ದೇವಿಗೆ ರುದ್ರಾಭಿಷೇಕ, ಪೂಜೆ, ಮಧ್ಯಾಹ್ನ ಹೂವಿನ ಅಲಂಕಾರ ಮತ್ತು ದಾಸೋಹ ಜರುಗಲಿದೆ. ಹರಿಹರದ ಟಿ. ಜಯದೇವಪ್ಪ ಮತ್ತು ಮಕ್ಕಳು, ಜಗದೀಶ ಮಲ್ಲಾಬಾದಿ ಮತ್ತು ಮಕ್ಕಳು, ಡಾ.ಎಂ.ಎಂ. ಪಟ್ಟಣಶೆಟ್ಟಿ ಮಕ್ಕಳು ಕುಟುಂಬದವರು ದಾಸೋಹ ಸೇವಾರ್ಥಿಗಳಾಗಿದ್ದಾರೆ.

## ಗಂಗನರಸಿಯಲ್ಲಿ ಇಂದು ಎಳ್ಳು ಅಮಾವಾಸ್ಯೆ ವಿಶೇಷ ಪೂಜೆ



ಹರಿಹರ ತಾಲ್ಲೂಕು ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ, ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಎಳ್ಳು ಅಮಾವಾಸ್ಯೆ ವಿಶೇಷ ಪೂಜೆ ನಡೆಯಲಿದೆ.

ಬೆಳಿಗ್ಗೆ 11 ಕ್ಕೆ ಶ್ರೀ ಗೋಣಿ ಬಸವೇಶ್ವರ, ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆಯನ್ನು ರಾಣೇಬೆನ್ನೂರು, ಹರಳಯ್ಯನಗರದ ಅಣ್ಣಪ್ಪ ನೀಲಪ್ಪ ಪೂಜಾರ ಏರ್ಪಡಿಸಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಬಿಸಿಎಂ ವಿದ್ಯಾರ್ಥಿ ನಿಲಯಕ್ಕೆ ನ್ಯಾಯಾಧೀಶರ ಭೇಟಿ, ಪರಿಶೀಲನೆ



ದಾವಣಗೆರೆ, ಜ. 10 - ದಾವಣಗೆರೆ ನಗರದ ವರ್ತುಲ ರಸ್ತೆಯಲ್ಲಿರುವ ಬಿಸಿಎಂ ಇಲಾಖೆ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಕ್ಕೆ ಮಂಗಳವಾರ ಅನಿರೀಕ್ಷಿತ ಭೇಟಿ ನೀಡಿದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಹಾಸ್ಟೆಲ್ ಸ್ವಚ್ಚತೆ ಕಾಪಾಡಿಕೊಂಡು ವಿದ್ಯಾರ್ಥಿಗಳ ಕುಂದು ಕೊರತೆಗಳ ನಿವಾರಣೆ ಮಾಡಲು ತಿಳಿಸಿದರು.

ಈ ವೇಳೆ ವಿದ್ಯಾರ್ಥಿಗಳು ಮಾತನಾಡಿ, ದಿನನಿತ್ಯ ಮೆನು ಬದಲಾಯಿಸಬೇಕು. ಗ್ರಂಥಾಲಯ ಸೌಲಭ್ಯ ಇಲ್ಲ, ಶೌಚಾಲಯ ಸ್ವಚ್ಚತೆ ಇಲ್ಲ, ಕೆಲವು ವಿದ್ಯಾರ್ಥಿಗಳಿಗೆ ಮಂಚದ ಸೌಲಭ್ಯ ಇಲ್ಲದೇ ನೆಲದ ಮೇಲೆ ಮಲಗುತ್ತಾರೆ. ನಿಲಯಕ್ಕೆ ವೈದ್ಯರು ಭೇಟಿ ನೀಡುವುದಿಲ್ಲ, ಕೊಠಡಿಯಲ್ಲಿ 10 ರಿಂದ 20 ವಿದ್ಯಾರ್ಥಿಗಳು ಇರುತ್ತಾರೆ, ಸೋಲಾರ್ ಇದ್ದರೂ ಸಹ ಸ್ನಾನಕ್ಕೆ ಬಿಸಿ ನೀರು ದೊರೆಯುವುದಿಲ್ಲ ಎಂದು ವಿದ್ಯಾರ್ಥಿಗಳು ತಮ್ಮ ಕುಂದು-ಕೊರತೆ ಬಗ್ಗೆ ಪ್ರಸ್ತಾಪಿಸಿದರು.

ವಿದ್ಯಾರ್ಥಿಗಳು ಹೇಳಿದ ಕುಂದು ಕೊರತೆಗಳನ್ನು ನಿವಾರಣೆ ಮಾಡುವ ಕೆಲಸವನ್ನು ವಾರ್ಡನ್ ಮಾಡಬೇಕು ಮತ್ತು ಇದಕ್ಕೆ ಬೇಕಾದ ವ್ಯವಸ್ಥೆಯನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುತ್ತದೆ ಎಂದ ನ್ಯಾಯಾಧೀಶರು, ಹಾಸ್ಟೆಲ್‌ನಲ್ಲಿರುವ ಸಮಸ್ಯೆಗಳು ಗಂಭೀರವಾಗಿದ್ದು ಪರಿಹರಿಸಿ ವಿದ್ಯಾರ್ಥಿಗಳಿಗೆ ಉತ್ತಮ ಸೌಕರ್ಯಗಳನ್ನು ಸಿಗುವಂತೆ ಮಾಡಲು ತಿಳಿಸಿದ ಅವರು, ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಲು ಕ್ರಮ ಜರುಗಿಸಲಾಗುತ್ತದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಉಪಸ್ಥಿತರಿದ್ದರು.

## ನಗರದಲ್ಲಿ ನಾಳೆ ಶೋಭಾಯಾತ್ರೆ

ದಾವಣಗೆರೆ, ಜ. 10- ರಾಷ್ಟ್ರೀಯ ಯುವ ದಿನಾಚರಣೆ ಪ್ರಯುಕ್ತ ನಾಡಿದ್ದು ದಿನಾಂಕ 12ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ನಗರದ ರಾಮಕೃಷ್ಣ ಮಿಷನ್ ವತಿಯಿಂದ ಶೋಭಾ ಯಾತ್ರೆ ಹಮ್ಮಿಕೊಳ್ಳಲಾಗಿದೆ.

ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಿಂದ ಪ್ರಾರಂಭ ಮಾಡಿ, ಅಂಬೇಡ್ಕರ್ ಸರ್ಕಲ್, ಎವಿಕೆ ಕಾಲೇಜು ರಸ್ತೆ ಮೂಲಕ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದ ಮಾರ್ಗವಾಗಿ ರಾಮಕೃಷ್ಣ ಮಿಷನ್ ತನಕ ಶೋಭಾಯಾತ್ರೆ ನಡೆಯಲಿದೆ ಎಂದು ಮಂದಿರದ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರಾನಂದ ತಿಳಿಸಿದ್ದಾರೆ.

ssims SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು
ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕಿನಲ್ಲಿ ಲಭ್ಯರಿರುತ್ತಾರೆ
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist

ಇದಕ್ಕಾಗಿ ಸಮಾಲೋಚಿಸಿ:
- ಗರ್ಭಾವಸ್ಥೆಯ ಮಧುಮೇಹ
- ಥೈರೊಯ್ಡ್ ಸಮಸ್ಯೆಗಳು
- ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
- ಹೃದ್ರೋಗಿಗಳಲ್ಲಿ ಮಧುಮೇಹ
- ನರಮಂಡದ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು

ದಿನಾಂಕ: ಶುಕ್ರವಾರ, 12ನೇ ಜನವರಿ 2024 । ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

## ಹೃದಯಪೂರ್ವಕ ಕೃತಜ್ಞತೆಗಳು

### ಸಹಸ್ರಾರ್ಜುನ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ., ಹರಿಹರ.


ದಿನಾಂಕ : 08.01.2024 ರಂದು ಸಂಘದ ಕಛೇರಿಯಲ್ಲಿ ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಶ್ರೀ ರಾಘವೇಂದ್ರ ಸಾ ಆರ್.ಮೆಹರ್ವಾಡೆ. ಮತ್ತು ನೂತನ ಉಪಾಧ್ಯಕ್ಷರಾಗಿ ಶ್ರೀ ಕೃಷ್ಣ ಸಾ ಆರ್. ಪೂಜಾರಿ ಇವರು ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಸಂಘದ ಸರ್ವ ಸದಸ್ಯರಿಗೂ, ಆಡಳಿತ ಮಂಡಳಿಯ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ, ಪಿಗ್ಮಿ ಸಂಗ್ರಹಕಾರರಿಗೂ, ಚುನಾವಣಾಧಿಕಾರಿಯವರಿಗೂ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರವನ್ನು ನೀಡಿದ

ಸರ್ವರಿಗೂ ಹೃದಯಪೂರ್ವಕ ಕೃತಜ್ಞತೆಗಳು.


ಶ್ರೀ ರಾಘವೇಂದ್ರ ಸಾ ಆರ್. ಮೆಹರ್ವಾಡೆ., ಅಧ್ಯಕ್ಷರು


ಶ್ರೀ ರೇವಣ ಸಾ ಭೂತೆ, ನಿರ್ದೇಶಕರು


ಶ್ರೀ ರಮೇಶ ಎಸ್. ಕಾಟ್ವೆ, ನಿರ್ದೇಶಕರು


ಶ್ರೀಮತಿ ಸೇವಂತಿ ಕೆ. ಭೂತೆ, ನಿರ್ದೇಶಕರು


ಶ್ರೀ ನಾರಾಯಣಸಾ ಎಂ. ಗುಜರಾತಿ, ನಿರ್ದೇಶಕರು



ಶ್ರೀ ಕೃಷ್ಣ ಸಾ.ಆರ್. ಪೂಜಾರಿ, ಉಪಾಧ್ಯಕ್ಷರು


ಶ್ರೀ ತುಳಜಾರಾಮ್ ಸಾ ಮೆಹರ್ವಾಡೆ, ನಿರ್ದೇಶಕರು


ಶ್ರೀ ಮೋಹನ ಟಿ. ಮೆಹರ್ವಾಡೆ, ನಿರ್ದೇಶಕರು


ಕು. ಶೋಭಾದೇವಿ ವಿ. ಮೆಹರ್ವಾಡೆ, ನಿರ್ದೇಶಕರು


ಶ್ರೀ ವಿಠ್ಠಲ ಎಂ. ಭೂತೆ, ನಿರ್ದೇಶಕರು


ಶ್ರೀ ಶಶಿಧರ್ ಡಿ. ಅನ್ವೇರಿ, ನಿರ್ದೇಶಕರು


ಶ್ರೀ ಹನುಮಂತರಾಜು ಎನ್.ಟಿ., ನಿರ್ದೇಶಕರು

## 17ನೇ ವರ್ಷದ ಪುಣ್ಯಸ್ಮರಣೆ



ದಿ|| ಬಿ.ಎಸ್. ಜಯಂಧರ್ (ಅಪ್ಪಾಜಿ)
ಜನನ : 26-06-1956 ನಿಧನ : 11-01-2007

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಕಲ್ಪನೆಯೊಂದಿಗೆ
ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ–ಮನಗಳಲ್ಲಿ
ದೀಪ ಮುಡಿಸಿ, ಶಿಸ್ತು–ಸಂಸ್ಕೃತಿ–ಸಂಸ್ಕಾರ ಕಲಿಸಿದ್ದೀರಿ.
ನಮಗೆ ನೀಡಿದ ಮಮಕಾರ,
ಪ್ರೀತಿ–ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ

ತಮ್ಮ ನೆನಪಿನಲ್ಲಿ ಪಯಣಿಸುತ್ತಿರುವ : ಪುತ್ರ - ಅಭಿಷೇಕ್ ಬೇತೂರ್, ಸೊಸೆ - ಶ್ರೀಮತಿ ಶ್ವೇತ ಅಭಿಷೇಕ್,
ಮೊಮ್ಮಗಳು - ನಿಧಿ ಬೇತೂರ್ ಮೊಮ್ಮಗ : ಸಮರ್ಥ್ ಬೇತೂರ್
ಹೆಚ್. ಆರ್. ಬೇತೂರ್, ವಿಜಯಲಕ್ಷ್ಮಿ ರಸ್ತೆ, ಹೆಚ್. ಆರ್. ಬೇತೂರ್ ಟ್ರೇಡರ್ಸ್, ಮಂಡಿಪೇಟೆ
ಬೇತೂರ್ ಕಮ್ಯೂನಿಕೇಷನ್ಸ್, ಪಿ.ಜೆ. ಬಡಾವಣೆ, ಬೇತೂರ್ ಎಂಟರ್‌ಪ್ರೈಸಸ್, ನಿಜಲಿಂಗಪ್ಪ ಬಡಾವಣೆ,
ಬೇತೂರ್ ಕುಟುಂಬವರ್ಗ ಹಾಗೂ ಬಂಧು-ಮಿತ್ರರು